بِسْمِ اللهِ الرَّحْمٰنِ الرَّحِيْمِ    نَحْمَدُهٗ وَنُصَلِّی عَلٰی رَسُوْلِهِ الْكَرِيْمِ    وَعَلٰی عَبْدِهِ الْمَسِيْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ವರ್ಷ: 02
ಸಂಚಿಕೆ: 38

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

23 ಸೆಪ್ಟೆಂಬರ್ 2021, 23 ತಬೂಕ್ 1400 ತಬ್‌ಲೀಗ್ ಹಿಜರಿ ಶಮ್‌ಸಿ,
15 ಸಫರ್ 1443 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَیِّدْ اِمَامَنَا بِرُوْحِ الْقُدُسِ
وَبَارِكْ لَنَا فِیْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

يٰۤاَيُّهَا الَّذِيْنَ اٰمَنُوْا
لَا تُحَرِّمُوْا طَيِّبٰتِ مَاۤ اَحَلَّ اللّٰهُ لَكُمْ
وَلَا تَعْتَدُوْا ؕ اِنَّ اللّٰهَ لَا يُحِبُّ الْمُعْتَدِيْنَ

(ಅಲ್‌ಮಾಇದ: 88)

**ಅಂದರೆ: ಎಲ್ಲೈ ವಿಶ್ವಾಸಿಗಳೇ, ಅಲ್ಲಾಹನು ನಿಮಗೆ ಧರ್ಮಬದ್ಧಗೊಳಿಸಿರುವ ಉತ್ತಮ ವಸ್ತುಗಳನ್ನು ನೀವು ನಿಷಿದ್ಧಗೊಳಿಸಬೇಡಿರಿ. ನೀವು ಮಿತಿಮೀರಲೂ ಬಾರದು. ಎಲ್ಲೆ ಮೀರುವವರನ್ನು ಅಲ್ಲಾಹನು ಖಂಡಿತವಾಗಿಯೂ ಇಷ್ಟಪಡುವುದಿಲ್ಲ.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ದಾನ (ಸದಖಾ) ನೀಡುವುದು, ಸಂಬಂಧಿಕರೊಡನೆ ಅನುಕಂಪ ಮತ್ತು ಸಾಂಪತ್ತಿಕ ತ್ಯಾಗಗಳ ಮಹತ್ವ

(1436) ಹಝ್‌ರತ್ ಹಕೀವ್ ಬಿನ್ ಹಝಾವ್(ರ) ವರದಿ ಮಾಡುತ್ತಾರೆ. ನಾನು ಹೇಳಿದೆ. ಯಾ ರಸೂಲುಲ್ಲಾಹ್! ನೀವು ತಿಳಿದವರೇ ಆಗಿದ್ದೀರಿ ನಾನು ಅಜ್ಞಾನತೆಯು ಕಾಲದಲ್ಲಿ ಪಾಪಗಳ ಪರಿಹಾರಕ್ಕಾಗಿ ಏನೆಲ್ಲಾ ಮಾಡುತ್ತಿದ್ದೆ, ಅಂದರೆ ದಾನ ಮಾಡುವುದು, ಅಥವಾ ಮುಕ್ತಿಬಂಧ ಅಥವಾ ಸಂಬಂಧಿಕರೊಡನೆ ಅನುಕಂಪ, ಈ ಕಾರ್ಯಗಳಲ್ಲೂ ಏನಾದರೂ ಪುಣ್ಯ ಇರಬಹುದೇ? ನಬಿ(ಸ) ನುಡಿದರು. ಈ ಸತ್ಕರ್ಮಗಳಿಂದಲೇ ನಿಮಗೆ ಇಸ್ಲಾಂ ಧರ್ಮ ಸ್ವೀಕರಿಸುವ ಭಾಗ್ಯ ದೊರೆತಿದೆ.

(1443) ಹಝ್‌ರತ್ ಊಬುಹುರೈರ(ರ) ವರದಿ ಮಾಡುತ್ತಾರೆ. ಹಝುರತ್ ರಸೂಲುಲ್ಲಾಹ್(ಸ) ನುಡಿದರು. ಜಿಪುಣ ಮತ್ತು ಉದಾರಿ (ಖರ್ಚು ಮಾಡುವವನು) ಯವರ ಉದಾಹರಣೆ ಆ ಎರಡು ವ್ಯಕ್ತಿಗಳಂತಿವೆ. ಅವರು ಎರಡು ಕಬ್ಬಿಣದ ಜುಬ್ಬಗಳನ್ನು ಎದೆಯಿಂದ ಗ್ ೂ ೀ ಣ ು ವ್ ು ೂ ಳ್ ದ್ ವ್ ರ್ ಗ್ ಧರಿಸಿಕೊಂಡಿರುತ್ತಾರೆ. ಉದಾರಿಯು ತನ್ನ ಸಂಪತ್ತು ಖರ್ಚು ಮಾಡುವಂತೆಯೇ ಅವನು ಧರಿಸಿರುವಂತಹ ಜುಬ್ಬ ಶರೀರವೆಲ್ಲ ಹರಡಿಕೊಳ್ಳುತ್ತದೆ. ಅಥವಾ (ಹೇಳೀದರು) ಎಷ್ಟರಮಟ್ಟಿಗೆ ಅದು ಹರಡುತ್ತದೆ ಎಂದರೆ ಅದು ಆತನ ಬೆರಳುಗಳನ್ನು ಮುಚ್ಚಿಕೊಳ್ಳುತ್ತದೆ. ಮತ್ತು ಅವನ ಪಾದಗಳ ಗುರುತು ಅಳಿಸಿ ಹಾಕುತ್ತದೆ. ಆದರೆ ಜಿಪುಣ ವ್ಯಕ್ತಿಯು ಆ ಸಮಯದಲ್ಲೂ ಖರ್ಚು ಮಾಡುವುದಿಲ್ಲ. ಎಲ್ಲಾ ಕ್ಷೇತ್ರಗಳು ತಮ್ಮ ತಮ್ಮ ಸ್ಥಳವನ್ನು ಸಂಕುಚಿತಗೊಳಿಸಿರುತ್ತದೆ. ಅದನ್ನು ಅವನು ಮುಕ್ತಗೊಳಿಸಬಯಸುತ್ತಾನೆ ಆದರೆ ಮುಕ್ತನಾಗುವುದಿಲ್ಲ.

**(ಸಹೀಹ್ ಬುಖಾರಿ, ನಂಪುಟ–3, ಕಿತಾಬುಝ್ಝಕಾತ್, ಮುದ್ರಣ 2008 ಖಾದಿಯಾನದ)**

**ನಾನು ನಿಮಗೆ ಹೇಳಬಯಸುವುದೇನೆಂದರೆ, ಹಝ್‌ರತ್ ರಸೂಲುಲ್ಲಾಹ್(ಸ) ಯಾವುದನ್ನು ಮಾಡಿಲ್ಲವೊ ಅದನ್ನು ನಾವು ಮಾಡುವುದು ಹಾನಿಕಾರಕವಾಗಿರುತ್ತದೆ. ಅವರ ಅನುಸರಣೆ ಬಿಟ್ಟು ಯಾರು ಎಷ್ಟೇ ಪ್ರಯತ್ನಪಟ್ಟರೂ ಗುರಿ ಸಾದಿಸಲಾಗದು. ಅಲ್ಲಾಹನು ಈ ಸಂಘಟನೆಯನ್ನು ಸ್ಥಾಪಿಸಿದ ಉದ್ದೇಶವೇ ಹಝ್‌ರತ್ ರಸೂಲುಲ್ಲಾಹ್(ಸ) ರವರಂತಹ ಜಮಾಅತ್ ತಯಾರಿಸುವುದಾಗಿದೆ.**

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಆಯತ್ ಅನ್‌ಅಮ್‌ತ ಅಲೈಹಿಮ್‌ನ ವ್ಯಾಖ್ಯಾನ

ಈ ಮಾತನ್ನು ಮರೆಯಬಾರದು. ಪವಿತ್ರ ಖುರ್‌ಆನ್‌ನ ಕೆಲ ಭಾಗಗಳು ಬೇರೆ ಭಾಗಗಳ ವ್ಯಾಖ್ಯಾನವಾಗಿರುತ್ತವೆ. ಒಂದು ಸ್ಥಳದಲ್ಲಿ ಒಂದು ಮಾತನ್ನು ಸಾರಾಂಶರೂಪದಲ್ಲಿ ಬಂದರೆ ಬೇರೆ ಸ್ಥಳದಲ್ಲಿ ಅದೇ ಮಾತು ವಿವರಣೆಯೊಂದಿಗೆ ಬಂದಿರುತ್ತದೆ. ಅಂದರೆ ಅದು ಮೊದಲ ಮಾತಿನ ವ್ಯಾಖ್ಯಾನವಾಗಿರುತ್ತದೆ. ಅಂದ ಹಾಗೆ ಇಲ್ಲಿ **"ಸಿರಾತಲ್ಲಝೀನ ಅನ್‌ಅಮ್‌ತ ಅಲೈಹಿಂ"** (ಅಲ್–ಫಾತಿಹಾ–7) ಇದು ಸಾರಾಂಶರೂಪವಾಗಿದೆ. ಆದರೆ ಬೇರೆ ಸ್ಥಳದಲ್ಲಿ ಅನುಗ್ರಹಿತರು ಯಾರೆಂಬುದನ್ನು ಸ್ವಯಂ ವ್ಯಾಖ್ಯಾನಿಸಿದೆ. **"ಮಿನನ್ನಬಿಯೀನ ವಸ್ಸಿದ್ದೀಖೀನ ವಶುಹದಾಯಿ ವಸ್ಸಾಲಿಹೀನ"** (ಅನ್ನಿಸಾಅ–70) ಅನುಗ್ರಹಿತರಲ್ಲಿ ನಾಲ್ಕು ವಿಧಗಳ ಜನರು ಇರುವರು. ನಬಿ, ಸಿದ್ದೀಖ್, ಶುಹದಾಯೀನ್ ಮತ್ತು ಸಾಲಿಹ್, ಪ್ರವಾದಿತ್ವವು ನಾಲ್ಕು ವಿಧಗಳಿಂದ ಕೂಡಿರುತ್ತವೆ. ಏಕೆಂದರೆ ಅದು ಅತ್ಯುನ್ನತ ಸ್ಥಾನವಾಗಿದೆ. ಪ್ರತಿಯೊಬ್ಬ ಮನುಷ್ಯನ ಕರ್ತವ್ಯವಾಗಿದೆ. ಆ ದರ್ಜೆಗಳನ್ನು ಪಡೆಯಲು ಹಝ್‌ರತ್ ರಸೂಲುಲ್ಲಾಹ್(ಸ) ತೋರಿಸಿಕೊಟ್ಟ ಮಾರ್ಗಗಳಂತೆ ಪ್ರಯತ್ನ ಮಾಡಬೇಕಾಗುತ್ತದೆ.

### ಹಝ್‌ರತ್ ರಸೂಲುಲ್ಲಾಹ್(ಸ) ರವರ ಮಾರ್ಗ ಎಂದೂ ಬಿಡಬಾರದು.

ನಾನು ನಿಮಗೆ ಹೇಳಬಯಸುತ್ತೇನೆ. ಹಲವು ಜನರು ತಾವೇ ರೂಪಿಸಿಕೊಂಡ ಮಂತ್ರ ಪಾಠಗಳಂತೆ ಆ ದರ್ಜೆಗಳನ್ನು ಪಡೆಯ ಬಯಸುತ್ತಾರೆ. ಆದರೆ ಹಝ್‌ರತ್ ರಸೂಲುಲ್ಲಾಹ್(ಸ) ರವರ ರೀತಿಯನ್ನು ಅನುಸರಿಸದೆ ಅದನ್ನು ನಾವು ಅನುಸರಿಸುವುದು ಹಾನಿಕಾರಕವಾಗಿರುತ್ತದೆ. ಹಝ್‌ರತ್ ರಸೂಲುಲ್ಲಾಹ್(ಸ) ರವರಿಗಿಂತ ಮಿಗಿಲಾದ ಅನುಗ್ರಹಿತ ಮಾರ್ಗಗಳ ನೈಜ ಅನುಭವಿ ಮತ್ಯಾರಿಂದ ಸಾಧ್ಯ. ಅವರ ಮೇಲಂತೂ ಪ್ರವಾದಿತ್ವದ ಎಲ್ಲಾ ಮಹಿಮೆಗಳು ಅಂತ್ಯಗೊಂಡಿವೆ. ಅವರು ಪಾಲಿಸಿದ ಮಾರ್ಗವೇ ಸರಿಯಾದ ಮಾರ್ಗವಾಗಿದೆ. ಆ ಮಾರ್ಗವನ್ನು ಬಿಟ್ಟು ತಮ್ಮದೇ ಬೇರೆ ಮಾರ್ಗ ಸೃಷ್ಟಿಸಿಕೊಳ್ಳುವುದು ಅದು ನಿಮಗೆ ಎಷ್ಟೇ ಸರಿ ಕಂಡರೂ ನನ್ನ ಅಭಿಪ್ರಾಯದಲ್ಲಿ ಅದು ವಿನಾಶದ ಮಾರ್ಗವಾಗಿದೆ. ಅಲ್ಲಾಹನು ಹಾಗೆಯೇ ನನಗೆ ತಿಳಿಸಿಕೊಟ್ಟಿದ್ದಾನೆ.

*(ಪುಟ ಸಂಖ್ಯೆ–11 ರಲ್ಲಿ ಮುಂದುವರಿಸಲಾಗಿದೆ)*

**ಇನ್ನಾ ನಹನು ನಝ್ಝಲ್‌ನಝ್ಝಿಕ್ರ ವ ಇನ್ನಾ ಲಹೂ ಲಹಾಫಿಝೂನ್ ಈ ವಚನ ಇಸ್ಲಾಮಿನ ಸತ್ಯತೆಗಾಗಿ ಒಂದು ಪ್ರಬಲ ಪುರಾವೆಯಾಗಿದೆ. ಪವಿತ್ರ ಖುರ್‌ಆನ್ ಅಲ್ಲಾಹನಿಂದ ಅವತರಿಸಿದೆ ಎನ್ನಲು, ಎಷ್ಟೊಂದು ಮಹತ್ವಪೂರ್ಣ ಸಾಕ್ಷ್ಯವಾಗಿದೆ. ಪವಿತ್ರ ಖುರ್‌ಆನ್ ಅನಕ್ಷರಸ್ತರಲ್ಲಿ ಅವತರಿಸುತ್ತದೆ ಮತ್ತು ಎಲ್ಲಾ ರೀತಿಯಿಂದ ಸುರಕ್ಷಿತವಾಗಿರುತ್ತದೆ. ಆದರೆ ತೌರಾತ್ ಮತ್ತು ಇಂಜೀಲ್ ತನ್ನ ಕಾಲಘಟ್ಟದ ವಿದ್ಯಾವಂತ ಸಮುದಾಯಗಳಲ್ಲಿ ಬಂದಿದೆ. ಆದರೆ ಸುರಕ್ಷಿತವಾಗಿಲ್ಲ.**

ಸಯ್ಯದ್‌ನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) ಸೂರ: ಅಲ್ ಹಿಜರ್ ವಚನ 10 **ಇನ್ನಾ ನಹನು ನಝ್ಝಲ್‌ನಝ್ಝಿಕ್ರ ವ ಇನ್ನಾ ಲಹೂ ಲಹಾಫಿಝೂನ್** ರ ವ್ಯಾಖ್ಯಾನ ಮಾಡುತ್ತ ಹೇಳುತ್ತಾರೆ.

ಈ ವಚನ ಇಸ್ಲಾಮಿನ ಸತ್ಯತೆಗಾಗಿ ಒಂದು ಪ್ರಬಲ ಪುರಾವೆಯಾಗಿದೆ. ಯಾವನೆ ಒಬ್ಬ ನಿಷ್ಪಕ್ಷಪಾತ ಮನುಷ್ಯ ಈ ವಚನದ ಬಗ್ಗೆ ಯೋಚಿಸಿದರೆ ತಿಳಿಯಬಹುದು. ಇದು ಮನುಷ್ಯನ ವಾದವಲ್ಲ. ಎಲ್ಲಾ ವ್ಯಾಖ್ಯಾನಗಾರರು ಸಹಮತ ಹೊಂದಿದ್ದಾರೆ. ಇದು ಮಕ್ಕದಲ್ಲಿ ಅವತರಿಸಿದ ಅಧ್ಯಾಯವಾಗಿದೆ. ಇಬ್ನು ಹಕ್ಕಾಮ್ ಹೇಳುತ್ತಾರೆ. ಈ ವಚನ ನುಬುವ್ವತ್ ದಾವೆಯ ನಂತರದ ನಾಲ್ಕನೆಯ

*(ಪುಟ ಸಂಖ್ಯೆ–09 ರಲ್ಲಿ ಮುಂದುವರಿಸಲಾಗಿದೆ)*

لَآ اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ✿ شَرَّ السُّمُوْمِ عَدَاوَۃُ الصُّلَحَاءِ

**ಮಿಯಾಂ ರಶೀದ್ ಅಹ್ಮದ್ ಗಂಗೋಹಿ ಮತ್ತು ಅವರಂತೆ ಇತರ ಮೌಲ್ವಿಗಳಿಗೆ ಒಂದು ಸಾವಿರ ರೂಪಾಯಿಯ ಬಹುಮಾನ, ಅವರು ಸಾಬೀತುಪಡಿಸಬೇಕು. ಇಮಾಮ್ ಮಹದಿಯ ಸತ್ಯತೆ ಕುರಿತ ಹದೀಸುಗಳಲ್ಲಿ ಬಂದ ಆ ನಾಲ್ಕು ದೃಷ್ಟಾಂತಗಳು ನನಗಿಂತ ಮೊದಲು–ಇನ್ಯಾರಲ್ಲಾದರೂ ಪೂರ್ತಿಗೊಂಡಿರಬೇಕು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್[ಅ] ರವರ ಈ ಬಹುಮಾನದ ಪಂಥಾಹ್ವಾನ ನಾವು ಅನ್ವಾರುಲ್ ಇಸ್ಲಾಮ್ ರೂಹಾನಿ ಖಝಾಯಿನ್ ಸಂಪುಟ 9 ರಿಂದ ಪ್ರಸ್ತುತಪಡಿಸುತ್ತಿದ್ದೇವೆ. ಮಿಯಾನ್ ರಶೀದ್ ಅಹ್ಮದ್ ಅವರು ಮಸೀಹ್[ಅ] ರವರನ್ನು ಕಾಫಿರ್ ಅಷ್ಟೇ ಅಲ್ಲ. ಕಾಫಿರಿಗಿಂತಲೂ ಕಡೆ (ಅಕ್ಫರ್) ಎಂದು ಹೇಳಿದರು. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್[ಅ] ಮಿಯಾನ್ ರಶೀದ್ ಅಹ್ಮದ್ ಗಂಗೋಹಿ ಅವರನ್ನು ವಿಶೇಷವಾಗಿ ಮತ್ತು ಅವರಂತೆ ಕಾಫಿರ್ ಎನ್ನುವ ಎಲ್ಲಾ ಮೌಲ್ವಿಗಳಿಗೆ ಒಂದು ಸಾವಿರ ರೂಪಾಯಿಯ ಬಹುಮಾನದ ಪಂಥಾಹ್ವಾನ ನೀಡಿದರು. ಹದೀಸಿನಲ್ಲಿ ವಿವರಿಸಲ್ಪಟ್ಟ ಇಮಾಮ್ ಮಹದಿಯ ಸತ್ಯತೆಗಿರುವ ನಾಲ್ಕು ದೃಷ್ಟಾಂತಗಳ ಬಗ್ಗೆ ವಿವರ ನೀಡಿ ಹೇಳಿದರು. ಈ ನಾಲ್ಕೂ ದೃಷ್ಟಾಂತಗಳು ನನ್ನ ಅಸ್ತಿತ್ವದಲ್ಲಿ ಪೂರ್ಣವಾಗಿವೆ. ಮಿಯಾನ್ ರಶೀದ್ ಅಹ್ಮದ್ ಗಂಗೋಹಿ ಅಥವಾ ಅವರಂತೆ ನನ್ನನ್ನು ಕಾಫಿರ್ ಮತ್ತು ಅಕ್ಫರ್ ಹೇಳುವ ಯಾವ ಮೌಲ್ವಿಯೇ ಆಗಲಿ ಆ ಹದೀಸುಗಳಲ್ಲಿ ವಿವರಿಸಲ್ಪಟ್ಟ ಇಮಾಮ್ ಮಹದಿಯ ಸತ್ಯತೆ ಕುರಿತಿರುವ ನಾಲ್ಕು ದೃಷ್ಟಾಂತಗಳು ನನಗಿಂತ ಮೊದಲು ಯಾವನೇ ವ್ಯಕ್ತಿಯಲ್ಲಿ ಪೂರ್ಣಗೊಂಡಿದ್ದು ಸಾಬೀತುಪಡಿಸಿದರೆ ನಾನು ಅವರಿಗೆ ಒಂದು ಸಾವಿರ ರೂಪಾಯಿ ಬಹುಮಾನ ನೀಡುವೆನು. ಇಮಾಮ್ ಮಹದಿಯ ಸತ್ಯತೆ ಬಗ್ಗೆ ಇರುವ ಆ ನಾಲ್ಕು ದೃಷ್ಟಾಂತಗಳು ಇಂತಿವೆ.

(1) ಇಮಾಮ ಮಹದಿಯ ಸತ್ಯತೆ ಕುರಿತಿರುವ ಒಂದು ದೃಷ್ಟಾಂತ: ಆ ಸಮಯದ ಮತಪಂಡಿತರು (ಉಲಮಾಅ) ಮಸೀಹರನ್ನು[ಅ] ಕಾಫಿರ್, ಮುಲ್‌ಹಿದ್, ದಜ್ಜಾಲ್ ಎಂದು ಭಾವಿಸುತ್ತಾ, ಧರ್ಮದ ಶತ್ರು ಎಂದು ಪರಿಗಣಿಸಿ ಅವರ ಮೇಲೆ ಕುಫ್ರಿನ (ಅವಿಶ್ವಾಸಿಯ) ಫತ್ವಾ ಹೊರಡಿಸುವರು. ಹದೀಸಿನಲ್ಲಿ ಬರುತ್ತದೆ. **ಉಲಮಾಉಹುಮ್ ಶರ್ರು ಮನ್ ತಹ್ತ ಅದೀಮಿಸ್ಸಮಾಇ** (ಮಿಶ್ಕಾತ್ ಕಿತಾಬುಲ್‌ಇಲ್ಮ್) ಅಂದರೆ ಇಮಾಮ್ ಮಹದಿಯ ಸಮಯದ ಉಲಮಾಅ ಭೂಮಂಡಲದಲ್ಲಿರುವ ಸೃಷ್ಟಿಗಳಲ್ಲಿ ಅತ್ಯಂತ ನಿಕೃಷ್ಟ ಸೃಷ್ಟಿಗಳಾಗಿರುವರು. ಕುಫ್ರ್ (ಅವಿಶ್ವಾಸದ) ಫತ್ವಾ ಜೊತೆ ಜೊತೆಯಲ್ಲಿ ಅವರ ಹತ್ಯೆಗಾಗಿಯೇ ಫತ್ವಾ ಹೊರಡಿಸುವರು. ಅದೇ ಕಾರಣದಿಂದ ಹಝ್ರತ್ ರಸೂಲುಲ್ಲಾಹ್[ಸ] ತನ್ನ ಸಮುದಾಯಕ್ಕೆ ಉಪದೇಶ ನೀಡಿದರು. **ಅಲಾ ಮನ್ ಅದ್‌ರಕಹು ಫಲ್‌ಯಖ್‌ರಅ ಅಲೈಹಿಸ್ಸಲಾಮ** (ತಿಬ್ರಾನಿ ) ಅಂದರೆ ಆಲಿಸಿರಿ. ನಿಮ್ಮ ಪೈಕಿ ಯಾರೇ ಆಗಲಿ ಅವರನ್ನು ಸಂದರ್ಶಿಸುವ ಭಾಗ್ಯ ದೊರೆತರೆ ಅವರಿಗೆ ನನ್ನ ಸಲಾಂ ತಲುಪಿಸಿರಿ. ಇದು ಭವಿಷ್ಯವಾಣಿ ರೂಪದಲ್ಲಿ ಒಂದು ವಿಶೇಷ ರೀತಿಯ ಸಲಾಂ ಆಗಿದೆ. ಅದರ ಅರ್ಥ ಆ ಸಮಯದ ಉಲಮಾಅ ಅವರ ಹತ್ಯೆ ಮಾಡುವ ಪ್ರಯತ್ನದಲ್ಲಿರುವರು. ಆದರೆ ಮಸೀಹರಿಗೆ ನನ್ನ ಕಡೆಯಿಂದ ಶಾಂತಿಯ ಸಂದೇಶ ತಲುಪಿಸಬೇಕು. ಅವರ ಶತಪ್ರಯತ್ನ ಫಲವಾಗಿಯೂ ಅವರಿಗೆ ಯಾವ ರೀತಿಯು ಹಗೆಯು ಆಗದು. ಅಂದ ಹಾಗೆ ಮುಹಿಯುದ್ದೀನ್ ಇಬ್ನು ಅರಬಿ (ರಹ) ನುಡಿಯುತ್ತಾರೆ. **ವ ಇಝಾ ಖರಜ ಹಾಝುಲ್ ಇಮಾಮುಲ್ ಮಹ್‌ದಿಯ್ಯು ಫಲೈಸಲಹೂ ಅದುವ್ವುಮ್ಮುಬೀನ್ ಇಲ್ಲಲ್ ಫುಖಹಾಉ ಖಾಸ್ಸ** (ಫುತುಹಾತೆ ಮರೆಯಾ) ಅಂತೂ ಇಮಾಮ್ ಮಹದಿಯ ಸತ್ಯತೆಗಿರುವ ಈ ದೃಷ್ಟಾಂತ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್[ಅ] ರವರ ಅಸ್ತಿತ್ವದಲ್ಲಿ ಅತ್ಯಂತ ಪೂರ್ಣ ಪ್ರಮಾಣದಲ್ಲಿ ಪೂರ್ತಿಯಾಗಿದೆ. ಏಕೆಂದರೆ ಎಷ್ಟು ಶಕ್ತಿಮೀರಿ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್[ಅ] ರವರ ಮೇಲೆ ಅವಿಶ್ವಾಸದ ಆರೋಪಗಳನ್ನು ಹೊರಿಸಲಾಗಿದೆಯೋ ಅದರ ಉದಾಹರಣೆ ಹಿಂದಿನ ಹದಿನಾಲ್ಕು ನೂರು ವರ್ಷಗಳಲ್ಲಿಯೂ ದೊರಕಲಾರದು.

2) ಇಮಾಮ್ ಮಹದಿಯ ಸತ್ಯತೆ ಕುರಿತು ಹದೀಸಿನಲ್ಲಿ ವಿವರಿಸಲಾದ ಎರಡನೆಯ ದೃಷ್ಟಾಂತವೆಂದರೆ, ಅದು ರಂಝಾನ್ ಮಾಹೆಯಲ್ಲಿ ಉಂಟಾಗುವ ಸೂರ್ಯ ಚಂದ್ರ ಗ್ರಹಣವಾಗಿದೆ. ಅಂದ ಹಾಗೆ ಈ ದೃಷ್ಟಾಂತ ಸಹ ಸಯ್ಯದ್‌ನಾ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ ಮಸೀಹ್ ಮೌಊದ್ ಹಾಗೂ ಮಹದಿ ಮೌಊದ್[ಅ] ರವರ ಅಸ್ತಿತ್ವದಲ್ಲಿ ಪೂರ್ಣಗೊಂಡಿದೆ. ಅದರ ಪೂರ್ಣ ವಿವರ ನಾವು ಹಿಂದಿನ ಸಂಚಿಕೆಗಳಲ್ಲಿ ನೀಡಿರುತ್ತೇವೆ.

3) ಮಹದಿಯವರ ಸತ್ಯತೆ ಕುರಿತು ಹದೀಸಿನಲ್ಲಿರುವ ಮೂರನೇ ದೃಷ್ಟಾಂತವೆಂದರೆ ಆ ಸಮಯ ಈಸಾ[ಅ] ಮತ್ತು ಮುಹಮ್ಮದ್[ಸ] ರವರ ಅನುಯಾಯಿಗಳ ಮಧ್ಯೆ ಭಿನ್ನಾಭಿಪ್ರಾಯ ಎಷ್ಟರಮಟ್ಟಿಗೆ ಉಲ್ಬಣಗೊಳ್ಳುವುದೆಂದರೆ ಯುದ್ಧರೂಪ ತಾಳುವುದು. ಆ ಸಮಯ ಸತ್ಯ, ಮುಹಮ್ಮದಿಯರ[ಸ] ಪರವಿರುವುದು. ಈ ದೃಷ್ಟಾಂತ ಅಮೃತ್ಸರದಲ್ಲಿ ನಡೆದ ಚರ್ಚಾಕೂಟ (ಜಂಗೆ ಮುಖದ್ದಸ್) ರೂಪದಲ್ಲಿ ಪೂರ್ಣಗೊಂಡಿತು. ಸತ್ಯವು ಮುಹಮ್ಮದಿಯರ[ಸ] ಪರವಾಗಿತ್ತು. ಆದರೆ ಶೈತಾನನು ಮತ್ತು ಅವನ ಚೇಲಾಗಳು ಕ್ರೈಸ್ತರು ಮತ್ತು ಅರ್ದಂಬರ್ದ ಕ್ರೈಸ್ತರು, ಸತ್ಯ ಕ್ರೈಸ್ತರ ಪರವಾಗಿದೆ ಎಂದು ವಾದಿಸಿಕೊಂಡರು.

ಹದೀಸಿನ ಪದಗಳು ಇಂತಿವೆ. **'ಯುನಾದಿ ಮುನಾದಿ ಮುನಾದಿಮ್ಮಿನಸ್ಸಮಾಇ ಅನ್ನಲ್‌ಹಖ್ಖ ಫೀ ಆಲಿ ಮುಹಮ್ಮದಿನ್ ವ ಯುನಾದಿ ಮಿನಲ್ ಅರ್‌ಝಿ ಅನ್ನಲ್‌ಹಖ್ಖ ಫೀ ಆಲಿ ಈಸ ಇನ್ನಮಲ್‌ಅಸ್‌ಫಲು ಕಲಿಮತುಶ್ಶೈತಾನಿ ವಸ್ಸೌತುಲ್ ಅಲಾ ಕಲಿಮತುಲ್ಲಾಹಿಲ್‌ಉಲ್‌ಯಾ.**

ಅನುವಾದ: ಆಕಾಶದಿಂದ ಧ್ವನಿ ಮೊಳಗುವುದು. ಸತ್ಯ ಮುಹಮ್ಮದೀಯರ ಪರವಾಗಿದೆ ಎಂದು. ಆದರೆ ಭೂಮಿಯಿಂದ ಧ್ವನಿ ಬರುವುದು. ಅದು ಶೈತಾನನ ಧ್ವನಿಯಾಗಿದೆ. ಯಾವುದು ಮೇಲಿನಿಂದ ಬರುವ ಧ್ವನಿಯಾಗಿದೆ. ಅದು ದೈವಿಕ ಧ್ವನಿಯಾಗಿರುತ್ತದೆ. ಅದು ಎಂದೆಂದಿಗೂ ಸರ್ವೋನ್ನತವಾಗಿರುತ್ತದೆ. (ಹುಲಿಮ ಅಬೀ ನಯೀಮ್, ಇಖ್ತಿರಬುಸ್ಸಾಅ ಪುಟ–108, ತಾರೀಖೆ ಅಹ್ಮದಿಯ್ಯತ್ ಸಂಪುಟ–1, ಪುಟ–509)

4) ನಾಲ್ಕನೇ ಕುರುಹು ಮುಹಮ್ಮದಿಯರ ಮತ್ತು ಕ್ರೈಸ್ತರ ಮಧ್ಯೆ ಯುದ್ಧರೂಪ ತಾಳಿದಾಗ ಮುಸಲ್ಮಾನರ ಒಂದು ವರ್ಗ ಮಹದಿಯಿಂದ ದ್ವೇಷ ಸಾಧಿಸುವ ಕಾರಣದಿಂದಾಗಿ ದಜ್ಜಾಲ್ ಅರ್ಥ ಕ್ರೈಸ್ತ ಪಾದರಿಗಳ ಜೊತೆಗಿರುವರು ಮತ್ತು ಅವರನ್ನು ವಿಜಯಿ ಎನ್ನುವರು. ಅಂದ ಹಾಗೆ ಹದೀಸಿನಲ್ಲಿ ಹೀಗಿದೆ.

ಅನ್ ಅನಸಿ . . . . (ಮಹೀ ಮುಸ್ಲಿಂ . . . )

ಅನುವಾದ: ಹಝ್ರತ್ ರಸೂಲುಲ್ಲಾಹ್(ಸ) ನುಡಿದರು. ಅಸಹಾಯ ಯಹೂದ್ಯರಿಂದ ಎಪ್ಪತ್ತು ಸಾವಿರ ಮಂದಿ ದಜ್ಜಾಲರನ್ನು ಹಿಂಬಾಲಿಸುವರು.

ಇನ್ನೊಂದು ಹದೀಸಿನಲ್ಲಿ ಹೀಗಿದೆ. **ಖಾಲನ್ನಬಿ ಸಲ್ಲಲ್ಲಾಹು ಅಲೈಹಿವಸಲ್ಲಮ: ಯತ್ತಬಿಯದ್ದಜ್ಜಾಲ ಮಿನ್ ಉಮ್ಮತಿ ಸಬ್‌ಊನ ಅಲಫನ್.** (ಅಬ್ದುರ್ ರಜಾಖ್ ಬರೆದಿರುವ ಕಿತಾಬುಲ್ ಫಿತನ್ ಬಾಬುದ್ದಜ್ಜಾಲ್)

ಇವು ಇಮಾಮ್ ಮಹದಿಯರ ಸತ್ಯತೆಗಿರುವ ನಾಲ್ಕು ದೃಷ್ಟಾಂತಗಳಿಗಾಗಿವೆ. ಅವು ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ ಮಸೀಹ್ ಮೌಊದ್, ಮಹದಿ ಮೌಊದ್[ಅ] ರವರ ಪರವಾಗಿ ಪೂರ್ಣಗೊಂಡವು. ಅವರಿಗಿಂತ ಮೊದಲು ಯಾವ ವ್ಯಕ್ತಿಯಲ್ಲೂ ಈ ದೃಷ್ಟಾಂತಗಳು ಪೂರ್ಣಗೊಂಡಿಲ್ಲ. ಯಾರಾದರೂ ಅಂತಹ ಉದಾಹರಣೆ ಮುಂದಿಟ್ಟರೆ ಅವರಿಗಾಗಿ ಅವರು ಒಂದು ಸಾವಿರ ರೂಪಾಯಿಗಳ ಬಹುಮಾನ ನಿಗದಿಪಡಿಸಿದರು. ಇದೀಗ ನಾವು ಕೆಳಗೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್[ಅ] ರವರ ಆ ಪ್ರಕಟನೆ ಪ್ರಸ್ತುತಪಡಿಸುತ್ತೇವೆ. ಅದರಲ್ಲಿ ಅವರು[ಅ] ಕಾಫಿರ್ ಎಂದಿರುವ ಸುಳ್ಳುಗಾರ ಎಂದಿರುವ ಮೌಲ್ವಿಗಳಿಗೆ ಒಂದು ಸಾವಿರ ರೂಪಾಯಿಗಳ ಬಹುಮಾನದ ಪಂಥಾಹ್ವಾನ ನೀಡಿದರು. ವಿಶೇಷವಾಗಿ ಮಿಯಾನ್ ರಶೀದ್ ಅಹ್ಮದ್ ಗಂಗೋಹಿಗೆ ಹಝ್ರತ್ ಮಸೀಹ್ ಮೌಊದ್[ಅ] ನುಡಿಯುತ್ತಾರೆ. ಓ ಕಾಫಿರ್ ಎನ್ನುವ ಮೌಲ್ವಿಗಳೇ! ಆ ಪೂರ್ವಜರ ಮತ್ತು ಪತ್ರಿಕೆಗಳ ಪೈಕಿ ನಿಮ್ಮ ಅಭಿಪ್ರಾಯವೇನು, ಅದು ಇಮಾಮ್ ಅಬ್ದುಲ್ ವಹಾಬ್ ಶಅರಾನಿ ಮತ್ತು ಇತರ ಪೂರ್ವ ಮಹಾತ್ಮರುಗಳು ತಮ್ಮ ತಮ್ಮ ಗ್ರಂಥಗಳಲ್ಲಿ ಸುಲಲಿತವಾಗಿ ಬರೆದಿರುತ್ತಾರೆ. ಅವುಗಳಲ್ಲಿ ಕೆಲ ಭಾಗ ಮೌಲ್ವಿ ಸಿದ್ದೀಖ್ ಹಸನ್ ಖಾನ್ ಭೂಪಾಲವಿ ಅವರು ತನ್ನ ಪಾರ್ಸಿ ಗ್ರಂಥ "ಹಜಜಲ್ ಕರಾಮ" ಇತ್ಯಾದಿಯಲ್ಲಿ ಸಂಕ್ಷಿಪ್ತವಾಗಿ ಬರೆದಿದ್ದಾರೆ. ಮಹದಿ

*(ಪುಟ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಹೇ ಅಮೀರಲ್ ಮೂಮಿನೀನ್! ......ನೀವು ಏನು ಬೇಕಾದರೂ ಮಾಡಿರಿ. ನೀವು ನಿಮ್ಮ ಅಭಿಪ್ರಾಯದ ಪ್ರಕಾರ ನಡೆಯಿರಿ. ನಾವು ನಿಮ್ಮೊಂದಿಗೆ ಇದ್ದೇವೆ. ನೀವು ನಮಗೆ ಆದೇಶ ನೀಡಿರಿ. ನಾವು ಅದನ್ನು ಅನುಸರಿಸುವೆವು. ನೀವು ನಮ್ಮನ್ನು ಕರೆಯಿರಿ ನಾವು ಅದನ್ನು ಕೇಳುವೆವು. ನೀವು ನಮ್ಮನ್ನು ಕಳುಹಿಸಿರಿ ನಾವು ಹೋಗುವೆವು. ನೀವು ನಮ್ಮನ್ನು ಜೊತೆಗೆ ಕೊಂಡುಹೋಗಲು ಬಯಸುವುದಾದರೆ ನಾವು ಜೊತೆಗೆ ಬರುವೆವು.**

**ರಸೂಲುಲ್ಲಾಹ್[ಸ] ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಫಾರೂಖೇ ಆಝುಮ್ ಹಝ್ರ‍್ರತ್ ಉಮರ್ ಬಿನ್ ಖತ್ತಾಬ್[ರ]ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ನಹಾವಾಂದ್‌ನ ವಿಜಯವು ಅದರ ಫಲಿತಾಂಶಗಳ ದೃಷ್ಟಿಯಿಂದ ಬಹಳ ಮಹತ್ವದ್ದಾಗಿತ್ತು. ಅದರ ನಂತರ ಇರಾನಿಯನ್ನರು ಒಂದೇ ಸ್ಥಳದಲ್ಲಿ ಸ್ಪರ್ಧಿಸಲು ಅವಕಾಶವನ್ನು ಪಡೆಯಲಿಲ್ಲ ಮತ್ತು ಮುಸ್ಲಿಮರು ಈ ವಿಜಯವನ್ನು ಫತಹ್ ಅಲ್–ಫತಹ್ ಎಂದು ನೆನಪಿಸಿಕೊಳ್ಳಲಾರಂಭಿಸಿದರು.**

**ಜುಂದೈ ಸಬೂರ್ ಯುದ್ಧ, ಫತ್‌ಹುಲ್ ಫತೂಹ್ ಸಹಾವಂದ್ ಯುದ್ಧ ಹಾಗೂ ಅಸ್ಫಹಾನ್ ಯುದ್ಧಗಳಲ್ಲಿ ನಡೆದ ಘಟನೆಗಳ ಪ್ರಸ್ತಾವನೆ**

**ಮೂರು ದಿವಂಗತರಾದ ಇಂಡೋನೇಶಿಯದ ಸನ್ಮಾನ್ಯ ಮುಹಮ್ಮದ್ ದಿಯಾನ್‌ತೂನೋ ಸಾಹಿಬ್, ಅಮೇರಿಕದ ಸನ್ಮಾನ್ಯ ಸಾಹಿಬ್‌ಝ಼ಾದ ಫರ್‌ಹಾನ್ ಲತೀಫ್ ಸಾಹಿಬ್, ಮತ್ತು ಸನ್ಮಾನ್ಯ ಮಲಿಕ್ ಮುಬಶ್ಶಿರ್ ಅಹ್ಮದ್ ಸಾಹಿಬ್‌ರವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝು ಜನಾಝು ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **20–08–2021** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ.

اِيَّاكَ نَعْبُدُ وَاِيَّاكَ نَسْتَعِيْنُ. اِهْدِنَا الصِّرَاطَ الْمُسْتَقِيْمَ.

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

ಹಝ್ರ‍್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಕಾಲದ ಪ್ರಸ್ತಾಪ ನಡೆಯುತ್ತಿದೆ. ಆ ಕಾಲದಲ್ಲಿ ನಡೆದ ಅನೇಕ ಯುದ್ಧಗಳ ಬಗ್ಗೆ ಪ್ರಸ್ತಾಪ ನಡೆಯುತ್ತಿತ್ತು. ಅವುಗಳಲ್ಲಿ ಒಂದು ಯುದ್ಧ ಜುಂದೈ ಸಾಬೂರ್ ಯುದ್ಧವಾಗಿದೆ. ಸಾಬೂರ್ ಖ಼ೂಝಿಸ್ತಾನಿನ ಒಂದು ಪಟ್ಟಣವಾಗಿತ್ತು. ಹಝ್ರ‍್ರತ್ ಅಬೂ ಸಬ್ರ ಬಿನ್ ರುಹಮ್ ಸಾಸಾನಿಯವರು ಗ್ರಾಮಗಳ ಮೇಲೆ ವಿಜಯ ಸಾಧಿಸಿದ ನಂತರ ಅವರು ಸೈನ್ಯದೊಂದಿಗೆ ಮುಂದೆ ಹೋದರು. ಬೆಳಿಗ್ಗೆ ರಾತ್ರಿ ಶತ್ರುಗಳೊಂದಿಗೆ ಯುದ್ಧಗಳು ನಡೆಯುತ್ತಿದ್ದುವು. ಆದರೆ ಶತ್ರುಗಳು ತಮ್ಮ ಜಾಗದಲ್ಲೇ ಸ್ಥಿರವಾಗಿದ್ದರು. ಒಂದು ದಿನ ಯಾವುದೋ ಸಾಮಾನ್ಯ ಮುಸ್ಲಿಮನ ಕಡೆಯಿಂದ ಅಭಯ ನೀಡುವ ಮಾತು ನಡೆಯಿತು. ಆಗ ಶತ್ರುಗಳು ಬೇಗನೇ ಗೋಡೆಯ ಬಾಗಿಲುಗಳನ್ನು ತೆರೆದರು. ಜಾನುವಾರುಗಳು ಹೊರಗೆ ಬಂತು, ಮಾರುಕಟ್ಟೆ ತೆರೆಯಿತು. ಜನರನ್ನು ಅಲ್ಲಿ ಇಲ್ಲಿ ಕಾಣಬಹುದಾಗಿತ್ತು. ನಿಮಗೆ ಏನಾಯಿತು ಎಂದು ಮುಸ್ಲಿಮರು ಶತ್ರುಗಳೊಡನೆ ಕೇಳಿದಾಗ ಅವರು ಹೇಳಿದರು: ನೀವು ನಮಗೆ ಅಭಯ ನೀಡಿರುವಿರಿ ಮತ್ತು ನಾವು ಅದನ್ನು ಸ್ವೀಕರಿಸಿದ್ದೇವೆ. ನಾವು ನಿಮಗೆ ಜಿಝ್ಯ ನೀಡುವೆವು ಮತ್ತು ನೀವು ನಮ್ಮನ್ನು ಸಂರಕ್ಷಿಸುವಿರಿ. ನಾವು ಹಾಗೆ ಮಾಡಿಲ್ಲವೆಂದು ಮುಸ್ಲಿಮರು ಹೇಳಿದರು. ನಾವು ಸುಳ್ಳು ಹೇಳುತ್ತಿಲ್ಲವೆಂದು ಶತ್ರುಗಳು ಹೇಳಿದರು. ಅನಂತರ ಮುಸ್ಲಿಮರು ಪರಸ್ಪರ ಇದರ ಬಗ್ಗೆ ಕೇಳಿದಾಗ ಮಖ್‌ನಫ್ ಎಂಬ ಹೆಸರಿನ ಒಬ್ಬ ಗುಲಾಮನ ಕಡೆಯಿಂದ ಈ ಮಾತು ನಡೆದಿತ್ತು ಎಂದು ಗೊತ್ತಾಯಿತು. ಇದರ ಕುರಿತು ಹಝ್ರ‍್ರತ್ ಉಮರ್‌ರೊಡನೆ ಕೇಳಲಾದಾಗ ಹಝ್ರ‍್ರತ್ ಉಮರ್(ರ) ಹೇಳಿದರು: ಅಲ್ಲಾಹನು ಪ್ರಾಮಾಣಿಕತೆಗೆ ಬಹಳ ಪ್ರಾಮುಖ್ಯತೆಯನ್ನು ನೀಡಿದ್ದಾನೆ. ನೀವು ಮಾಡಿದ ಪ್ರತಿಜ್ಞೆಯನ್ನು ಈಡೇರಿಸುವ ತನಕ ನೀವು ಪ್ರಾಮಾಣಿಕರಾಗಲು ಸಾಧ್ಯವಿಲ್ಲ. ಅದು ಗುಲಾಮನು ಮಾಡಿದ್ದರೂ ಅದನ್ನು ಈಡೇರಿಸಬೇಕು. (ಸೀರತ್ ಅಮೀರುಲ್ ಮುಮಿನೀನ್ ಉಮರ್ ಬಿನ್ ಖತ್ತಾಬ್, ಅಸ್‌ಲಾಬಿ, ಪುಟ–425, ದಾರುಲ್ ಮಾರಿಫ ಬೈರೂತ್ 2007) (ಸಯ್ಯದುನಾ ಉಮರ್ ಬಿನ್ ಖತ್ತಾಬ್, ಶಖ್ಸಿಯ್ಯತ್ ಕೇ ಕಾರ್ನಾಮೆ, ಪುಟ-689, ಅಲ್‌ಫುರ್‌ಖಾನ್ ಖಾನ್ ಗಢ್ ಪಾಕಿಸ್ತಾನ್) (ಮುಜಮುಲ್ ಬಲದಾನ್, ಸಂಪುಟ–2, ಪುಟ–198)

ಈ ಯುದ್ಧವೂ ಖೂಝಿಸ್ತಾನ್‌ನ ವಿಜಯದ ಮುಕ್ತಾಯವಾಗಿತ್ತು. (ಪ್ರಬಂಧ: 'ತಾರೀಖೆ ಇಸ್ಲಾಮ್ ಬಿಅಹದಿ ಹಝ್ರತ್ ಉಮರ್(ರ), ಸಯ್ಯದ್ ಮೀರ್ ಮಹ್ಮೂದ್ ಅಹ್ಮದ್ ನಾಸಿರ್ ಸಾಹಿಬ್, ಪುಟ–135)

ಹಝ್ರತ್ ಮುಸ್ಲಿಹ್ ಮೌಊದ್(ರ)ರವರು ಈ ಘಟನೆಯನ್ನು ವಿವರಿಸುತ್ತ ಹೇಳುತ್ತಾರೆ: " ಹಝ್ರತ್ ಉಮರ್(ರ) ರವರ ಜಾಲಘಟ್ಟದಲ್ಲಿ ಓರ್ವ ಹಬ್‌ಶಿ ಗುಲಾಮನು ಒಂದು ಜನಾಂಗದೊಂದಿಗೆ ಹೀಗೆ ಹೀಗೆ ರಿಯಾಯಿತಿಗಳನ್ನು ನೀಡಲಾಗುವುದು ಎಂದು ಓಪ್ಪಂದ ಮಾಡಿಕೊಂಡಿದ್ದನು. ಇಸ್ಲಾಮಿಕ್ ಸೇನೆಯು ಹೊರಟುಹೋದಾಗ, ಇದು ನಮ್ಮೊಂದಿಗಿನ ಒಪ್ಪಂದ ಎಂದು ಈ ಜನಾಂಗ ಹೇಳಿತು. ಸೇನೆಯ ಹಿರಿಯ ಅಧಿಕಾರಿ ಈ ಒಪ್ಪಂದವನ್ನು ಒಪ್ಪಿಕೊಳ್ಳಲು ಹಿಂಜರಿದಾಗ, ವಿಳಯವು ಹಝ್ರತ್ ಉಮರ್(ರ) ರವರ ಬಳಿಗೆ ಹೋಯಿತು. ಆಗ ಅವರು ಹೇಳಿದರು ಮುಸ್ಲಿಮರ ಮಾತು ಆತನು ಗುಲಾಮನಾಗಿದ್ದರೂ ಸಹ ಸುಳ್ಳಾಗಬಾರದು ಎಂದು ಹೇಳಿದರು." (ಬಾಝ್ ಝುರೂರಿ ಉಮೂರ್, ಅನ್ವಾರುಲ್ ಉಲೂಮ್, ಸಂಪುಟ–12, ಪುಅ–405)

ಹಝ್ರತ್ ಮೊಸ್ಲೆಹ್ ಮೌಊದ್(ರ) ಹಝ್ರತ್ ಉಮರ್(ರ) ರ ಕಾಲದಲ್ಲಿ ಶತ್ರು ಸೈನ್ಯವೊಂದು ಸುತ್ತುವರಿಸಲಾಯಿತು ಆಗ ಅವರಿಗೆ ಈಗ ನಮ್ಮ ಉಳಿವು ಸಾಧ್ಯವಿಲ್ಲ ಎಂದು ಅವರು ಅರ್ಥಮಾಡಿಕೊಂಡರು. ಇದು ಈ ಹಿಂದೆ ವಿವರಿಸಿದ ಘಟನೆಯ ವಿವರಣೆಯಾಗಿದೆ. ಅವರು ತಮ್ಮದೇ ಮಾತುಗಳಲ್ಲಿ ಹೇಳಿದ್ದಾರೆ. ಇಸ್ಲಾಮಿಕ್ ಕಮಾಂಡರ್ ಒತ್ತಡದಲ್ಲಿ ನಮ್ಮ ಕೋಟೆಯನ್ನು ವಶಪಡಿಸಿಕೊಳ್ಳುತ್ತಿದ್ದಾರೆ. ಒಂದು ವೇಳೇ ಅವನು ಗೆದ್ದರೆ, ನಮ್ಮೊಂದಗೆ ಮಫ್‌ತೂಹ್ ಮುಲ್ಕ್‌ನ (ವಿಜಯಶಾಲಿ ದೇಶದ) ವ್ಯವಹಾರ ಮಾಡಲಾಗುತ್ತದೆ. ಪ್ರತಿಂಯೊಬ್ಬ ಮುಸ್ಲಿಂ ವಿಜಯಶಾಲಿಯಾಗಿರುವುದರ ಮತ್ತು ಸಂಧಾನ ಮಾಡಿಕೊಳ್ಳುವ ನಡುವಿನ ವ್ಯತ್ಯಾಸವನ್ನು ಅರ್ಥಮಾಡಿಕೊಂಡಿದ್ದನು. ವಿಜಯಶಾಲಿಯಾದವರೊಂದಿಗೆ ಸಾಮಾನ್ಯ ಇಸ್ಲಾಮಿಕ್ ಕಾನೂನನ್ನು ಜಾರಿಯಾಗುತ್ತಿತ್ತು ಮತ್ತು ಸಂಧಾನ ಮಾಡಿಕೊಳ್ಳುವವರೊಂದಿಗೆ ಎದುರಾಳಿಯರು ಯಾವುದೇ ಶರತ್ತು ಬೇಕಾದರು ಅಥವಾ ಅವರು ಬಯಸಿದಷ್ಟು ಹಕ್ಕುಗಳನ್ನು ತೆಗೆದುಕೊಳ್ಳಬಹುದಗುತ್ತು. ಮೃದುವಾದ ಷರತ್ತುಗಳ ಮೇಲೆ ಸಂಧಾನಕ್ಕೆ ಕಾರಣವಾಗುವ ಮಾರ್ಗವನ್ನು ಕಂಡುಕೊಳ್ಳಬೇಕು ಎಂದು ಅವರು ಯೋಚಿಸಿದರು. ಆದ್ದರಿಂದ ಒಂದು ದಿನ ಒಬ್ಬ ಹಬ್‌ಶಿ ಮುಸ್ಲಿಂ ನೀರು ತರುತ್ತಿದ್ದನು ಆಗ ಅವರು ಆತನ ಬಳಿಗೆ ಹೋಗಿ, ಎಲ್ಲೈ ಸಹೋದರನೇ!! ಒಂದು ವೇಳೆ ಸಂಧಾನವಾದರೆ ಇದು ಯುದ್ಧಕ್ಕಿಂತ ಉತ್ತಮ

ಮಾರ್ಗವಲ್ಲವೇ? ಎಂದು ಕೇಳಿದರು ಆಗ ಆತನು ಹೌದು, ಇದು ಒಳ್ಳೆಯದು, ಎಂದು ಹೇಳಿದರು. ಆತ ಹಬ್‌ಶಿ ಅವಿದ್ಯಾವಂತನಾಗಿದ್ದನು. ಅವರು ಹೇಳಿದರು "ಹಾಗಾದರೆ ನಾವು ನಮ್ಮ ದೇಶದಲ್ಲಿ ಮುಕ್ತವಾಗಿ ಬದುಕಬೇಕು ಮತ್ತು ನಮಗೆ ಏನನ್ನೂ ಹೇಳಲಾಗುವುದಿಲ್ಲ ಎಂಬ ಶರತ್ತಿನ ಮೇಲೆ ಏಕೆ ಸಂಧಾನ ಮಾಡಬಾರದು. ನಮ್ಮ ಸಂಪತ್ತು ನಮ್ಮೊಂದಿಗೆ ಇರಲಿ ಮತ್ತು ನಿಮ್ಮ ಸಂಪತ್ತು ನಿಮ್ಮೊಂದಿಗೆ ಇರಲಿ. ಅವರು ಹೇಳಿದರು, ಆಗ ಆತನು ಸರಿ ಎಂದು ಹೇಳಿದನು. ಅದಕ್ಕೆ ಅವರು ಕೋಟೆಯ ದ್ವಾರಗಳನ್ನು ತೆರೆದರು. ಇಸ್ಲಾಮಿಕ್ ಸೇನೆಯು ಬಂದಾಗ, ಶತ್ರು ಹೇಳಿದರು, "ನಾವು ನಿಮ್ಮೊಂದಿಗೆ ಒಪ್ಪಂದ ಮಾಡಿಕೊಂಡಿದ್ದೇವೆ." ಮುಸ್ಲಿಮರು ಒಪ್ಪಂದ ಎಲ್ಲಿದೆ ಮತ್ತು ಯಾವ ಅಧಿಕಾರಿ ಅದನ್ನು ಮಾಡಿದರು? "ನಮಗೆ ಗೊತ್ತಿಲ್ಲ," ಎಂದು ಅವರು ಹೇಳಿದರು. ನಿಮ್ಮ ಅಧಿಕಾರಿಗಳು ಯಾರು ಮತ್ತು ಯಾರು ಅಲ್ಲ ಎಂದು ನಮಗೆ ಹೇಗೆ ಗೊತ್ತು? ಒಬ್ಬ ಮನುಷ್ಯ ಇಲ್ಲಿ ನೀರು ತುಂಬುತ್ತಿದ್ದನು, ನಾವು ಅವನೊಂದಿಗೆ ಮಾತನಾಡಿದೆವು ಅವನು ಇದನ್ನು ನಮಗೆ ಹೇಳಿದನು. ಆಗ ಮುಸ್ಲಿಮರು ಹೇಳಿದರು: "ನೋಡಿ, ಒಬ್ಬ ಗುಲಾಮ ಹೊರಬಂದಿದ್ದನು ಅವನಿಗೆ ವಿಷಯ ಏನಾಯಿತು? ಎಂದು ಕೇಳಿ. ಅವರು ಹಬ್‌ಶಿ ಗುಲಾಮರಿಗೆ ಹೇಳಿದರು, "ಹೌದು, ನನ್ನೊಂದಿಗೆ ಹೀಗೆ ಮಾತಾಗಿತ್ತು" ಹಾಗಾಗಿ ಮುಸ್ಲಿಮರು ಆತ ಗುಲಾಮ ಎಂದು ಹೇಳಿದರು. ಅವನಿಗೆ ನಿರ್ಧರಿಸುವ ಅಧಿಕಾರವನ್ನು ಯಾರು ನೀಡಿದರು? ಎಂದು ಹೇಳಿದಾಗ ಅವರು ಹೇಳಿದರು ನಾವು ಅಪರಿಚಿತರು, ಇವನು ನಿಮ್ಮ ಅಧಿಕಾರಿಯಾಗಿರಬಹುದು ಎಂದು ನಾವು ತಿಳಿದಿದ್ದೇವೆ, ಇಲ್ಲಿ ಅವರು ಜಾಗೃಕತೆಯನ್ನು ತೋರಿಸಿದರು. ಆಗ ಅಧಿಕಾರಿ ಹೇಳಿದರು, "ನಾನು ಇದನ್ನು ನಂಬಲು ಸಾಧ್ಯವಿಲ್ಲ, ಆದರೆ ನಾನು ಈ ಘಟನೆಯನ್ನು ಹಝ್ರತ್ ಉಮರ್(ರ) ರವರಿಗೆ ಬರೆಯುತ್ತಿದ್ದೇನೆ. ಹಝ್ರತ್ ಉಮರ್(ರ)ರವರು ಈ ಪತ್ರವನ್ನು ಸ್ವೀಕರಿಸಿದಾಗ, "ಇನ್ನುಂದೆ ಸೇನಾಧಿಪತಿ ಇಲ್ಲದೆ ಯಾವುದೇ ಒಪ್ಪಂದವನ್ನು ಮಾಡಲಾಗುವುದಿಲ್ಲ ಎಂದು ಘೋಷಿಸಿರಿ, ಆದರೆ ಓರ್ವ ಮುಸ್ಲಿಮನು ನಾಲಿಗೆ ಕೊಟ್ಟರೆ ನಾನು ಆತನನ್ನು ಸುಳ್ಳುಗಾರನನ್ನಾಗಿಸುವುದಿಲ್ಲ" ಈಗ ನೀವು ಆಹಬ್‌ಶಿ ಗುಲಾಮ ಮಾಡಿದ ಒಪ್ಪಂದವನ್ನು ಒಪ್ಪಿಕೊಳ್ಳಬೇಕು. ಆದರೆ, ಸೇನಾಧಿಪತಿ ಹೊರತುಪಡಿಸಿ ಇನ್ನುಮುಂದೆ ಯಾರೂ ಯಾವುದೇ ಜನಾಂಗದೊಂದಿಗೆ ಒಪ್ಪಂದ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಘೋಷಿಸಿ. (ಸೇರೆ ರೂಹಾನಿ(7), ಅನ್ವರ್-ಉಲ್-ಉಲೂಮ್, ಸಂಪುಟ-24, ಪುಟಗಳು 293-294)

ಇರಾನ್ ವಿಜಯದ ಕಾರಣಗಳ ಪ್ರಸ್ತಾಪದಲ್ಲಿ ಹೀಗೆ ಹೇಳಲಾಗಿದೆ: ಇರಾಕ್ ಮತ್ತು ಅಹ್‌ವಾಝ್ಹಿನ ಯುದ್ಧದೊಂದಿಗೆ ಈ ಘೋರ ಯುದ್ಧ ಕೊನೆಗೊಳ್ಳಲಿ ಎಂದು ಹಝ್ರತ್ ಉಮರರ(ರ) ಹೃದಯ ಬಯಸುತ್ತಿತ್ತು, ಆದರೆ ಇರಾನಿನ ಆಡಳಿತವು ನಿರಂತರವಾಗಿ ನಡೆಸುತ್ತಿದ್ದ ಯುದ್ಧದ ಕಾರ್ಯಚರಣೆಗಳ ಕಾರಣದಿಂದ ಅವರ ಈ ಬಯಕೆ ಈಡೇರಲಿಲ್ಲ. ಹಿಜರೀ 17ರಲ್ಲಿ ಯುದ್ಧದ ಮೈದಾನದಿಂದ ಸೈನ್ಯದ ಸರದಾರರ ಒಂದು ಸಂಘವು ಹಝ್ರತ್ ಉಮರರ(ರ) ಸನ್ನಿಧಿಯಲ್ಲಿ ಹಾಜರಾದರು. ಮುಸ್ಲಿಮರು ಜಯಿಸಿದ ಪ್ರದೇಶಗಳಲ್ಲಿ ದಂಗೆಯೇಳುವ ಕಾರಣವನ್ನು ಹಝ್ರತ್ ಉಮರ್(ರ) ಅವರೊಡನೆ ಕೇಳಿದರು. ಗೆದ್ದ ಪ್ರದೇಶಗಳ ನಿವಾಸಿಗಳಿಗೆ ತೊಂದರೆ ಉಂಟಾಗಲು ಮುಸ್ಲಿಮರು ಕಾರಣವಾಗುತ್ತಿರಬಹುದು ಎಂಬ ಸಂಶಯವನ್ನು ಹಝ್ರತ್ ಉಮರ್(ರ) ವ್ಯಕ್ತಪಡಿಸಿದರು. ಎಲ್ಲ ಸರದಾರರು ಈ ಮಾತನ್ನು ನಿರಾಕರಿಸಿದರು ಮತ್ತು ಹೀಗೆ ಹೇಳಿದರು: ಮುಸ್ಲಿಮರು ಪೂರ್ಣ ನಿಷ್ಠೆಯಿಂದ ಮತ್ತು ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಹಾಗಾದರೆ ಈ ಅಸ್ತವ್ಯಸ್ತತೆಗೆ ಕಾರಣವೇನು ಎಂದು ಹಝ್ರತ್ ಉಮರ್(ರ) ಕೇಳಿದರು. ಸಂಘದ ಇತರ ಸದಸ್ಯರಿಗೆ ಇದಕ್ಕೆ ಸಮಾಧಾನಕರವಾದ ಉತ್ತರವನ್ನು ಕೊಡಲು ಸಾಧ್ಯವಾಗಿರಲಿಲ್ಲ. ಆದರೆ ಅಹ್‌ನಫ್ ಬಿನ್ ಖೈಸ್ ಹೇಳಿದರು: ಅಮೀರುಲ್ ಮೂಅ್‌ಮಿನೀನ್, ನಾನು ನಿಮಗೆ ಯಥಾರ್ಥ ಸ್ಥಿತಿಯ ಬಗ್ಗೆ ಹೇಳುತ್ತೇನೆ. ಸಂಗತಿ ಏನೆಂದರೆ, ನೀವು ನಮ್ಮನ್ನು ಇನ್ನೂ ಮುಂದಕ್ಕೆ ಹೋಗುವುದನ್ನು ತಡೆದಿದ್ದೀರಿ ಮತ್ತು ವಿಜಯ ಸಾಧಿಸಲ್ಪಟ್ಟ ಪ್ರದೇಶದಲ್ಲೇ ನಿಲ್ಲಲು ಹೇಳಿದ್ದೀರಿ. ಆದರೆ ಇರಾನಿನ ಅರಸ ಜೀವಂತವಾಗಿರುವರು. ಅವರು ಜೀವಂತವಾಗಿರುವ ತನಕ ನಮ್ಮೊಡನೆ ಹೋರಾಟವನ್ನು ಜಾರಿಯಲ್ಲಿರಿಸುವರು. ಒಂದು ದೇಶದಲ್ಲಿ ಎರಡು ಆಡಳಿತಗಳು ಇರಲು ಸಾಧ್ಯವಿಲ್ಲ. ಹೇಗಿದ್ದರೂ ಒಂದು ಇನ್ನೊಂದನ್ನು ಹೊರಗೆ ಹಾಕುವುದು. ಒಂದೋ ಇರಾನಿ ಇರುವರು ಅಥವಾ ನಾವು ಇರುವರು. ನಿಮ್ಮ ಆದೇಶದ ಪ್ರಕಾರ ನಾವು ಯಾವುದೇ ಪ್ರದೇಶವನ್ನು ಸ್ವತಃ ಪಡೆಯಲಿಲ್ಲ. ಬದಲಾಗಿ ಶತ್ರುಗಳು ಆಕ್ರಮಣ ನಡೆಸಿದ ಕಾರಣ ಅವುಗಳನ್ನು ಗೆಲ್ಲಲಾಯಿತು. ನಾವು ಎಂದಿಗೂ ಸ್ವತಃ ಯುದ್ಧ ಮಾಡಲಿಲ್ಲ. ಇದೇ ನಿಮ್ಮ ಆದೇಶವಾಗಿತ್ತು. ಶತ್ರುಗಳು ಆಕ್ರಮಣ ನಡೆಸುವಾಗ ಯುದ್ಧ ಮಾಡಬೇಕಾಗಿ ಬರುತ್ತಿತ್ತು. ಹೀಗೆ ಆ ಪ್ರದೇಶವನ್ನು ಗೆಲ್ಲಲಾಗುತ್ತಿತ್ತು. ಅಕಾರಣವಾಗಿ ಯುದ್ಧ ಮಾಡಲು ನೆಪವನ್ನು ಮುಂದಿರಿಸುವ ಈಗಿನ ಮುಸ್ಲಿಮರಿಗೂ ಮತ್ತು ಇಸ್ಲಾಮಿನ ಮೇಲೆ ಆಕ್ಷೇಪವೆತ್ತುವ ಜನರಿಗೂ ಇಲ್ಲಿ ಉತ್ತರವಿದೆ. ಮುಸ್ಲಿಮರು ಎಂದಿಗೂ ಪ್ರದೇಶಗಳನ್ನು ಪಡೆಯಲಿಕ್ಕಾಗಿ ಅಥವಾ ಜಯ ಗಳಿಸಲು ಯುದ್ಧಗಳನ್ನು ಮಾಡಿರಲಿಲ್ಲ. ನಾವು ದಾಳಿ ನಡೆಸಿ ಫಾರಿಸಿನ ಅರಸನನ್ನು ಹೊರಹಾಕಲು ನೀವು ಅನುಮತಿ ನೀಡುವ ತನಕ ಶತ್ರುಗಳ ಈ ರೀತಿ ಜಾರಿಯಲ್ಲಿರುವುದು. (ಪ್ರಬಂಧ: 'ತಾರೀಖ್ ಇಸ್ಲಮ್ ಬಿಅಹದಿ ಹಝ್ರತ್ ಉಮರ್(ರ), ಸಯ್ಯದ್ ಮೀರ್ ಮಹ್ಮೂದ್ ಅಹ್ಮದ್ ನಾಸಿರ್ ಸಾಹಿಬ್, ಪುಟ-136-138) (ತಾರೀಖ್ ಅತ್ತಿಬರಿ, ಸಂಪುಟ-2, ಪುಟ-502-503, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಹಝ್ರತ್ ಉಮರ್(ರ) ಈ ಅಭಿಪ್ರಾಯವನ್ನು ಸರಿಯೆಂದು ಒಪ್ಪಿದರು ಮತ್ತು ಈಗ ಇರಾನಿನ ಮೇಲೆ ದಾಳಿ ನಡೆಸುವುದರ ಹೊರತು ಬೇರೆ ಮಾರ್ಗವಿಲ್ಲ ಎಂದು ಅವರಿಗೆ ಗೊತ್ತಾಯಿತು. ಬೇರೆ ನಿರ್ವಾಹವಿರಲಿಲ್ಲ. ಹಾಗಲ್ಲದೇ ಶಾಂತಿ ಸ್ಥಾಪನೆಯಾಗಲು ಸಾಧ್ಯವಿಲ್ಲ. ಇಲ್ಲದಿದ್ದರೆ ಮುಸ್ಲಿಮರು ಕೊಲ್ಲಲ್ಪಡುತ್ತಾ ಹೋಗುವರು, ಯುದ್ಧಗಳು ನಡೆಯುತ್ತಾ ಹೋಗುವುವು. ಆದರೂ ಅದರ ಬಗ್ಗೆ ಕಾರ್ಯರೂಪದ ತೀರ್ಮಾನವನ್ನು ಹಝ್ರತ್ ಉಮರ್(ರ) ಒಂದುವರೆ ವರ್ಷದ ನಂತರ ಹಿಜರೀ 21ರಲ್ಲಿ ನಹಾವಂದಿನ ಯುದ್ಧದ ನಂತರ ಮಾಡಿದರು. ಆಗ ಇರಾನಿಯರು ಶಕ್ತವಾಗಿ ಮುಸ್ಲಿಮರನ್ನ ಎದುರಿಸಲು ಹೊರಟಿದ್ದರು. (ಪ್ರಬಂಧ: 'ತಾರೀಖ್ ಇಸ್ಲಮ್ ಬಿಅಹದಿ ಹಝ್ರತ್ ಉಮರ್(ರ), ಸಯ್ಯದ್ ಮೀರ್ ಮಹ್ಮೂದ್ ಅಹ್ಮದ್ ನಾಸಿರ್ ಸಾಹಿಬ್, ಪುಟ-138-139)

ನಹಾವಂದ್ ಯುದ್ಧಕ್ಕೆ ಫತ್‌ಹಲ್ ಫತೂಹ್ ಎಂದು ಹೇಳಲಾಗುತ್ತದೆ. ಇರಾನಿನ ಮೇಲಿನ ವಿಜಯಗಳಲ್ಲಿ ಖಾದಿಸಿಯ, ಜಲೂಲ ಮತ್ತು ನಹಾವಂದಿನ ಯುದ್ಧಗಳಿಗೆ ವಿಧಿನಿರ್ಣಾಯಕ ಸ್ಥಾನವಿದೆ. ನಹಾವಂದಿನ ಮೇಲೆ ವಿಜಯ ತನ್ನ ಪರಿಣಾಮದ ದೃಷ್ಟಿಯಲ್ಲಿ ಬಹಳ ಮುಖ್ಯವಾಗಿತ್ತು. ಮುಸ್ಲಿಮರ ಎಡೆಯಲ್ಲಿ ಇದು ಫತಹುಲ್ ಫೂತೂಹ್ ಎಂಬ ಹೆಸರಿನಲ್ಲಿ ಪ್ರಸಿದ್ಧವಾಯಿತು. ಎಂದರೆ ಎಲ್ಲ ವಿಜಯಗಳಿಗಿಂತ ದೊಡ್ಡ ವಿಜಯ.

ನಹಾವಂದಿನ ಈ ಯುದ್ಧ ಮೊದಲ ಎರಡು ಹೀನಾಯ ಸೋಲುಗಳ ನಂತರ ಇರಾನಿಯರ ಕಡೆಯಿಂದ ಆಕ್ರಮಣದ ಕೊನೆಯ ಪ್ರಯತ್ನವಾಗಿತ್ತು. ಈ ಯುದ್ಧದ ವಿವರಣೆ ಹೀಗಿದೆ: ಇರಾನಿನ ಅರಸನಾದ ಯಝ್‌ದಜರ್ ಬಹಳ ಕ್ರಿಯಾಶೀಲರಾಗಿ ಮುಸ್ಲಿಮರನ್ನು ಎದುರಿಸಲು ಸೈನ್ಯವನ್ನು ಒಟ್ಟು ಸೇರಿಸಲು ಶುರುಮಾಡಿದರು. ತಮ್ಮ ಪತ್ರಗಳ ಮೂಲಕ ಖುರಾಸಾನಿನಿಂದ ಸಿಂಧ್ ತನಕ ಒಂದು ಚಲನೆಯನ್ನು ಉಂಟುಮಾಡಿದರು. ಎಲ್ಲ ಕಡೆಯಿಂದಲೂ ಇರಾನಿನ ಸೈನ್ಯ ಎದ್ದು ನಹಾವಂದಿನಲ್ಲಿ ಒಟ್ಟು ಸೇರಿತ್ತು.

ಹಮ್‌ದಾನ್ ರಾಜ್ಯದ ರಾಜಧಾನಿಯಾದ ಹಮ್‌ದಾನಿನಿಂದ ಸುಮಾರು ಎಪ್ಪತ್ತು ಕಿಲೋಮೀಟರ್ ದೂರದಲ್ಲಿ ದಕ್ಷಿಣ ದಿಕ್ಕಿನಲ್ಲಿ ನಹಾವಂದ್ ಇದೆ. (ಅಟ್ಲಸ್ ಫತೂಹಾತೆ ಇಸ್ಲಮಿಯ, ಸಂಪುಟ-2, ಪುಟ-115, ದಾರುಸ್ಸಲಾಮ್ ರಿಯಾಝ್ 1428)

ನಹಾವಂದ್ ಸಂಪೂರ್ಣವಾಗಿ ಪರ್ವತಗಳ ನಡುವೆ ಇರುವ ಪಟ್ಟಣವಾಗಿದೆ. (ಸೀರತ್ ಅಮೀರುಲ್ ಮುಇನೀನ್ ಉಮರ್ ಬಿನ್ ಖತ್ತಾಬ್, ಅಸ್ಸಲಾಬಿ ಪುಟ-426, ದಾರುಲ್ ಮಾರಿಫ ಬೈರೂತ್ 2007)

ಈ ಸೈನ್ಯದ ಬಗ್ಗೆ ಹಝ್ರತ್ ಸಅದ್(ರ) ಹಝ್ರತ್ ಉಮರ್‌ರಿಗೆ(ರ) ತಿಳಿಸಿದರು. (ತಾರೀಖ್ ಅತ್ತಿಬರಿ ಸಂಪುಟ-2, ಪುಟ-522, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಕೆಲವು ದಿನಗಳ ನಂತರ ಹಝ್ರತ್ ಉಮರ್(ರ) ಹಝ್ರತ್ ಸಅದ್‌ರನ್ನು ವಜಾಗೊಳಿಸಿದರು. ಹಝ್ರತ್ ಸಅದ್‌ರಿಗೆ ಮದೀನ ಹೋಗಲು ಸಂದರ್ಭ ಸಿಕ್ಕಿತ್ತು. ಆಗ ಈ ಎಲ್ಲ ಸಂಗತಿಗಳನ್ನು ಹಝ್ರತ್ ಸಅದ್(ರ) ನೇರವಾಗಿ ಹಝ್ರತ್ ಉಮರ್‌ರಿಗೆ ತಿಳಿಸಿದರು. (ತಾರೀಖ್ ಅತ್ತಿಬರಿ, ಸಂಪುಟ-2, ಪುಟ-522, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಹಝ್ರತ್ ಸಅದ್‌ರನ್ನು ವಜಾಗೊಳಿಸಿದ ನಂತರ ಈ ಮುಖ್ಯ ಹುದ್ದೆಯನ್ನು ಹಝ್ರತ್ ಅಮ್ಮಾರ್ ಬಿನ್ ಯಾಸಿರಿಗೆ ನೀಡಲಾಯಿತು. ಇರಾನಿಯರ ಯುದ್ಧ ಕಾರ್ಯಚರಣೆಗಳ ಕುರಿತು ಲಭಿಸುತ್ತಿದ್ದ ಮಾಹಿತಿಗಳನ್ನು ಹಝ್ರತ್ ಅಮ್ಮಾರ್(ರ) ಮದೀನಕ್ಕೆ ಕಳುಹಿಸುತ್ತಿದ್ದರು. (ಅಕ್ಬಾರ್ ಅತ್ತವಾಲ್, ವಖ್‌ಅತುಲ್ ಖಾದ್ಸಿಯ, ಪುಟ-192, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001) (ಪ್ರಬಂಧ: 'ತಾರೀಖ್ ಇಸ್ಲಮ್

ಬಿಅಹದಿ ಹಝ್ರತ್ ಉಮರ್(ರ), ಸಯ್ಯದ್ ಮೀರ್ ಮಹ್ಮೂದ್ ಅಹ್ಮದ್ ನಾಸಿರ್ ಸಾಹಿಬ್, ಪುಟ-140)

ಮದೀನದಲ್ಲಿ ಹಝ್ರತ್ ಉಮರ್(ರ) ಮದೀನದಲ್ಲಿ ಸಮಾಲೋಚನೆಗಾಗಿ ಶ್ರೇಷ್ಠ ಸಹಾಬರನ್ನು ಒಟ್ಟುಸೇರಿಸಿದರು. ಮಿಂಬರ್‌ನಲ್ಲಿ ನಿಂತುಕೊಂಡು ಒಂದು ಭಾಷಣವನ್ನು ಮಾಡಿದರು. ಅದರಲ್ಲಿ ಅವರು ಹೀಗೆ ಹೇಳಿದರು: ಎಲ್ಲೈ ಅರಬ್ ಸಮುದಾಯವೇ, ಅಲ್ಲಾಹನು ಇಸ್ಲಾಮಿನ ಮೂಲಕ ನಿಮಗೆ ನೆರವು ನೀಡಿರುವನು. ಭಿನ್ನತೆಯ ನಂತರ ನಿಮ್ಮಲ್ಲಿ ಒಗ್ಗಟ್ಟನ್ನು ಉಂಟುಮಾಡಿದನು. ಹಸಿವೆಯ ನಂತರ ನಿಮ್ಮನ್ನು ಸಂಪನ್ನಗೊಳಿಸಿದನು. ಯಾವ ಮೈದಾನದಲ್ಲೂ ನೀವು ಶತ್ರುಗಳನ್ನು ಎದುರಿಸಬೇಕಾಗಿ ಬಂತೋ ಅಲ್ಲೆಲ್ಲ ನಿಮಗೆ ವಿಜಯವನ್ನು ನೀಡಿದನು. ನೀವು ಎಂದಿಗೂ ಬಲಹೀನರಾಗಲೂ ಇಲ್ಲ ಪರಾಜಯಗೊಳ್ಳಲೂ ಇಲ್ಲ. ಅಲ್ಲಾಹನ ಪ್ರಕಾಶವನ್ನು ನಂದಿಸಲು ಈಗ ಶೈತಾನನು ಕೆಲವು ಸೈನ್ಯಗಳನ್ನು ಒಟ್ಟುಗೂಡಿಸಿದ್ದಾನೆ. ಇದು ಅಮ್ಮಾರ್ ಬಿನ್ ಯಾಸಿರಿನ ಪತ್ರವಾಗಿದೆ. ಕೂಫ ಮತ್ತು ಬಸ್ರದಲ್ಲಿರುವ ಮುಸ್ಲಿಮರನ್ನು ತಮ್ಮ ದೇಶದಿಂದ ಹೊರಹಾಕಿ ಸ್ವತಃ ನಿಮ್ಮ ದೇಶದ ಮೇಲೆ ಆಕ್ರಮಣ ನಡೆಸಲಿಕ್ಕಾಗಿ ಕೋಮಸ್, ತಬರಿಸ್ತಾನ್, ನಂಬಾವಂದ್, ಜರ್‌ಜಾನ್, ಅಸ್ಫಹಾನ್, ಖುಮ್, ಹಮ್‌ದಾನ್, ಮಹೀನ್ ಮತ್ತು ಸಬ್‌ಝಾನಿನ ನಿವಾಸಿಗಳು ತಮ್ಮ ಅರಸನ ಸುತ್ತ ಒಟ್ಟುಗೂಡಿರುವರು. ಹೇ ಜನರೇ, ಈ ಕುರಿತು ನನಗೆ ನಿಮ್ಮ ಸಲಹೆಯನ್ನು ನೀಡಿರಿ. (ಅಖ್ಬಾರ್ ಅತ್ತವಲ್, ಪುಟ-192, ವಖ್‌ಅತು ನಹಾವಂದ್, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಇದು ಮುಖ್ಯವಾದ ವಿಷಯವಾಗಿದೆ. ನೀವು ಹೆಚ್ಚು ಮಾತನಾಡಿಕೊಂಡು ಪರಸ್ಪರ ಭಿನ್ನಾಭಿಪ್ರಾಯಗಳನ್ನು ಹೊಂದಲು ನಾನು ಬಯಸುವುದಿಲ್ಲ. ನೀವು ನನಗೆ ಸಂಕ್ಷಿಪ್ತವಾಗಿ ಸಲಹೆಯನ್ನು ನೀಡಿರಿ. ನಾನು ಸ್ವತಃ ಈಗ ಇರಾನಿಗೆ ಹೋಗಿ ಬಸ್ರಾ ಮತ್ತು ಕೂಫದ ನಡುವೆ ಅನುಯೋಜ್ಯವಾದ ಸ್ಥಳದಲ್ಲಿ ತಂಗಿ ನಮ್ಮ ಸೈನ್ಯಕ್ಕೆ ಸಹಾಯ ಮಾಡಬೇಕೇ? ಅಲ್ಲಾಹನ ಅನುಗ್ರಹದಿಂದ ಈ ಯುದ್ಧದಲ್ಲಿ ವಿಜಯ ಲಭಿಸಿದರೆ ನಮ್ಮ ಸೈನ್ಯವನ್ನು ಶತ್ರುಗಳ ಪ್ರದೇಶದಲ್ಲಿ ದಾಳಿ ನಡೆಸಲು ರವಾನೆ ಮಾಡಬೇಕೇ? (ತಾರೀಖ್ ಅತ್ತಿಬರಿ, ಸಂಪುಟ-2, ಪುಟ-523, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಹಝ್ರತ್ ಉಮರರ ಭಾಷಣದ ನಂತರ ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾಹ್ ನಿಂತರು ಮತ್ತು ತಶಹ್ಹುದ್ ನಂತರ ಹೇಳಿದರು: ಹೇ ಅಮೀರಲ್ ಮೂಮಿನೀನ್, ಆಡಳಿತ ಕಾರ್ಯಗಳು ನಿಮ್ಮನ್ನು ಬುದ್ಧಿವಂತರನ್ನಾಗಿ ಮಾಡಿವೆ. ಅನುಭವಗಳು ನಿಮ್ಮನ್ನು ಜಾಗರೂಕರನ್ನಾಗಿ ಮಾಡಿವೆ. ನೀವು ಏನು ಬೇಕಾದರೂ ಮಾಡಿರಿ. ನೀವು ನಿಮ್ಮ ಅಭಿಪ್ರಾಯದ ಪ್ರಕಾರ ನಡೆಯಿರಿ. ನಾವು ನಿಮ್ಮೊಂದಿಗೆ ಇದ್ದೇವೆ. ನೀವು ನಮಗೆ ಆದೇಶ ನೀಡಿರಿ. ನಾವು ಅದನ್ನು ಅನುಸರಿಸುವೆವು. ನೀವು ನಮ್ಮನ್ನು ಕರೆಯಿರಿ ನಾವು ಅದನ್ನು ಕೇಳುವೆವು. ನೀವು ನಮ್ಮನ್ನು ಕಳುಹಿಸಿರಿ ನಾವು ಹೋಗುವೆವು. ನೀವು ನಮ್ಮನ್ನು ಜೊತೆಗೆ ಕೊಂಡುಹೋಗಲು ಬಯಸುವುದಾದರೆ ನಾವು ಜೊತೆಗೆ ಬರುವೆವು. ನೀವು ಸ್ವತಃ ಇದರ ಕುರಿತು ತೀರ್ಮಾನ ಮಾಡಿರಿ. ಏಕೆಂದರೆ ನೀವು ತಿಳಿದವರೂ ಮತ್ತು ಅನುಭವಿಯಾಗಿರುವಿರಿ. ಹಝ್ರತ್ ತಲ್‌ಹ(ರ) ಹೀಗೆ ಹೇಳಿಕೊಂಡು ಕುಳಿತುಕೊಂಡರು. ಆದರೆ ಹಝ್ರತ್ ಉಮರ್(ರ) ಸಲಹೆಯನ್ನು ಪಡೆಯಲು ಬಯಸುತ್ತಿದ್ದರು. ಅವರು ಹೇಳಿದರು: ಜನರೇ ಏನಾದರೂ ಹೇಳಿರಿ. ಏಕೆಂದರೆ ಇಂದಿನ ಸಂದರ್ಭ ಎಂತಹದ್ದು ಎಂದರೆ, ಅದರ ಪರಿಣಾಮ ದೀರ್ಘಕಾಲೀನವಾಗಿರುವುದು. ಆಗ ಹಝ್ರತ್ ಉಸ್ಮಾನ್(ರ) ಎದ್ದುನಿಂತರು ಮತ್ತು ಹೀಗೆ ಹೇಳಿದರು: ಹೇ ಅಮೀರಲ್ ಮೂಮಿನೀನ್, ನನ್ನ ಅಭಿಪ್ರಾಯವೇನೆಂದರೆ ಸಿರಿಯ ಮತ್ತು ಯಮನ್‌ಗೆ ಆದೇಶ ಕಳುಹಿಸಿರಿ. ಅಲ್ಲಿ ಇಸ್ಲಾಮಿನ ಸೈನ್ಯಗಳು ಇರಾನಿನ ಕಡೆಗೆ ರವಾನೆಯಾಗಲಿ. (ತಾರೀಖ್ ಅತ್ತಿಬರಿ, ಸಂಪುಟ-2, ಪುಟ-523-524, ದರುಲ್ ಕುತುಬ್ ಇಲ್‌ಮಿಯ ಬೈರೂತ್ 2012) ಅದೇ ರೀತಿಯಲ್ಲಿ ಬಸ್ರದ ಕಡೆಗೂ ಆದೇಶ ಕಳುಹಿಸಿರಿ. ಅಲ್ಲಿಂದಲೂ ಸೈನ್ಯಗಳು ರವಾನೆಯಾಗಲಿ. (ಅಖ್ಬಾರ್ ಅತ್ತವಾಲ್, ವಾಖಿಅ ಸಹಾವಂದ್, ಪುಟ-193, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012) (ತರೀಖ್ ಅತ್ತಿಬರಿ, ಸಂಪುಟ-2, ಪುಟ-524, ದರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ನೀವು ಸ್ವತಃ ಹಿಜಾಝಿನ ಸೈನ್ಯಗಳೊಂದಿಗೆ ರವಾನೆಯಾಗಿರಿ. ಸಭೆಯ ಹೆಚ್ಚಿನ ಜನರು ಈ ಸಲಹೆಯನ್ನು ಇಷ್ಟಪಟ್ಟರು. ಇದು ಸರಿಯೆಂದು ಮುಸ್ಲಿಮರು ಎಲ್ಲ ಕಡೆಯಿಂದ ಹೇಳಿದರು. (ಅಖ್ಬಾರ್ ಅತ್ತವಾಲ್, ಪುಟ-193, ವಖ್‌ಅ ನಹಾವಂದ್, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹಝ್ರತ್ ಉಮರ್(ರ) ಅದನ್ನೂ ಅಂಗೀಕರಿಸಲಿಲ್ಲ. ಹೆಚ್ಚಿನ ಸಲಹೆಯನ್ನು ಕೇಳಿದರು. ಆಗ ಹಝ್ರತ್ ಅಲಿ(ರ) ಎದ್ದುನಿಂತರು ಒಂದು ದೀರ್ಘವಾದ ಭಾಷಣವನ್ನು ಮಾಡಿದರು. ಅದರಲ್ಲಿ ಹೀಗೆ ಹೇಳಿದರು: ಅಮೀರಲ್ ಮೂಮಿನೀನ್, ನೀವು ಸಿರಿಯದ ಸೈನ್ಯವನ್ನು ಅಲ್ಲಿಂದ ಸಾಗಲು ಆಜ್ಞಾಪಿಸಿದರೆ ಅಲ್ಲಿ ರೋಮನ್ನರ ಆಡಳಿತ ಆಕ್ರಮಿಸುವುದು. ಯಮನಿನಿಂದ ಇಸ್ಲಾಮಿನ ಸೈನ್ಯ ಹೋದರೆ ಅಬೀಸೀನಿಯ ಆಡಳಿತ ಯಮನನ್ನು ವಶಪಡಿಸುವುದು. ನೀವು ಸ್ವತಃ ರವಾನೆಯಾದರೆ, ಮುಸ್ಲಿಮರು ದೇಶದ ಮೂಲೆ ಮೂಲೆಯಿಂದ ನಿಮ್ಮೊಂದಿಗೆ ಜೊತೆ ಸೇರಲು ಎದ್ದೇಳುವರು. ಯಾವ ಅಪಾಯವನ್ನು ಎದುರಿಸಲು ನೀವು ಹೋಗುತ್ತಿರುವರೋ ಅದಕ್ಕಿಂತ ಹೆಚ್ಚು ಅಪಾಯ ದೇಶ ಖಾಲಿಯಾಗುವುದರಿಂದ ಸ್ವತಃ ಇಲ್ಲಿ ಉಂಟಾಗುವುದು. ಆದ್ದರಿಂದ ಮುಸ್ಲಿಮ್ ರಾಜ್ಯಗಳು ತಮ್ಮ ಸೈನ್ಯದ ಒಂದೊಂದು ಭಾಗವನ್ನು ಇರಾನಿಗೆ ರವಾನಿಸಲು ನೀವು ಮುಸ್ಲಿಮ್ ರಾಜ್ಯಗಳಿಗೆ ಸಂದೇಶ ಕಳುಹಿಸಿರಿ. ಉಳಿದ ಸೈನ್ಯ ತಮ್ಮ ತಮ್ಮ ಪ್ರದೇಶಗಳಲ್ಲಿ ಸಂರಕ್ಷಣೆಗಾಗಿ ಅಲ್ಲೇ ಇರಲಿ.

ನೀವು ಸ್ವತಃ ಯುದ್ಧ ಮೈದಾನಕ್ಕೆ ಹೋಗುವುದು ಸರಿಯಲ್ಲ. ಏಕೆಂದರೆ, ನಿಮ್ಮ ಪೊಸಿಶನ್ ಮುತ್ತುಗಳು ಪೋಣಿಸಲ್ಪಟ್ಟ ಹಾರದಂತಾಗಿದೆ. ಹಾರ ತುಂಡಾದರೆ ಮುತ್ತುಗಳು ಪಸರಿಸುವುದು. ಅರೇಬಿಯದ ಅಧಿಕಾರಿಯೇ ಯುದ್ಧ ಮೈದಾನಕ್ಕೆ ಬಂದಿರುವರು ಎಂದು ಇರಾನಿಯರಿಗೆ ಗೊತ್ತಾದರೆ ಅವರು ತಮ್ಮ ಪರಿಪೂರ್ಣ ಶಕ್ತಿಯನ್ನು ಉಪಯೋಗಿಸಿ ಹೋರಾಟಕ್ಕಾಗಿ ಬರುವರು. ನೀವು ಶತ್ರುಗಳ ಕಾರ್ಯಚರಣೆಗಳ ಬಗ್ಗೆ ಹೇಳಿದ್ದೀರಿ. ಅಲ್ಲಾಹನು ನಿಮ್ಮ ಕಾರ್ಯಚರಣೆಯ ಮುಂದೆ ಶತ್ರುಗಳ ಕಾರ್ಯಚರಣೆಯನ್ನು ಬಹಳ ಅನಿಷ್ಟತೆಯಿಂದ ಕಾಣುತ್ತಾನೆ. ಅಲ್ಲಾಹನು ಇಷ್ಟಪಡದ ಸಂಗತಿಯನ್ನು ಬದಲಾಯಿಸಲು ಅಲ್ಲಾಹನು ಶಕ್ತನು. ನೀವು ಶತ್ರುಗಳ ಸಂಖ್ಯೆಯ ಆಧಿಕ್ಯದ ಬಗ್ಗೆ ಹೇಳಿದ್ದೀರಿ. ಹಿಂದಿನಿಂದಲೂ ನಾವು ಹೆಚ್ಚಿನ ಸಂಖ್ಯೆಯ ಬಲದಲ್ಲಿ ಯುದ್ಧ ಮಾಡುತ್ತಿರಲಿಲ್ಲ. ಬದಲಾಗಿ ಅಲ್ಲಾಹನ ಸಹಾಯ ಲಭಿಸುವುದು ಎಂಬ ಭರವಸೆಯಿಂದ ಯುದ್ಧ ಮಾಡುತ್ತಿದ್ದೆವು. ನಮ್ಮ ವಿಷಯದಲ್ಲಿ ವಿಜಯ ಮತ್ತು ಸೋಲು ಸೈನ್ಯದ ಆಧಿಕ್ಯ ಮತ್ತು ಕೊರತೆಯ ಕಾರಣದಿಂದ ಆಗಿರುವುದಿಲ್ಲ. ಇದು ಅಲ್ಲಾಹನ ಧರ್ಮವಾಗಿದೆ. ಅದಕ್ಕೆ ಅಲ್ಲಾಹನು ವಿಜಯ ನೀಡಿದ್ದಾನೆ. ಇದು ಅಲ್ಲಾಹನ ಸಹಾಯ ಲಭಿಸಿದ ಅಲ್ಲಾಹನ ಸೈನ್ಯವಾಗಿದೆ. ದೇವದೂತರ ಮೂಲಕ ಅದಕ್ಕೆ ನೆರವು ನೀಡಿದನು. ಇದರಿಂದ ಅದಕ್ಕೆ ಈ ಸ್ಥಾನ ಲಭಿಸಿದೆ. ನಮ್ಮೊಂದಿಗೆ ಅಲ್ಲಾಹನ ವಾಗ್ದಾನವಿದೆ. ಅಲ್ಲಾಹನು ತನ್ನ ವಾಗ್ದಾನವನ್ನು ಖಂಡಿತ ಈಡೇರಿಸುವನು. ತನ್ನ ಸೈನ್ಯವನ್ನು ಖಂಡಿತ ಸಹಾಯಿಸುವನು. (ತಾರೀಖ್ ಅತ್ತಿಬರಿ, ಸಂಪುಟ-2, ಪುಟ-523, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಹಝ್ರತ್ ಉಮರ್(ರ) ಈ ಅಭಿಪ್ರಾಯವನ್ನು ಇಷ್ಟಪಟ್ಟರು. ಹಝ್ರತ್ ಉಮರ್(ರ) ಹೇಳಿದರು: ಯಾವ ವ್ಯಕ್ತಿಯನ್ನು ಸೈನ್ಯದ ಕಮಾಂಡರ್ ಮಾಡಬೇಕೆಂದು ನೀವು ಸಲಹೆ ನೀಡಿರಿ, ಆದರೆ ಇರಾಕಿನ ಯುದ್ಧಗಳಲ್ಲಿ ಭಾಗಿಯಾದ ಅನುಭವವಿರುವ ವ್ಯಕ್ತಿಯ ಹೆಸರನ್ನು ಹೇಳಿರಿ. ಜನರು ಹೇಳಿದರು: ಹುಝೂರ್, ನೀವು ಸ್ವತಃ ಇರಾಕ್ ನಿವಾಸಿಗಳ ಮತ್ತು ಅಲ್ಲಿಯ ಸೈನ್ಯದ ಕುರಿತು ಹೆಚ್ಚು ತಿಳಿದಿದ್ದೀರಿ. ಅವರು ನಿಮ್ಮ ಬಳಿಗೆ ಪ್ರತಿನಿಧಿ ಸಂಘವಾಗಿ ಬರುತ್ತಿದ್ದರು. ನಿಮಗೆ ಅವರನ್ನು ಅರಿಯಲು ಮತ್ತು ಮಾತುಕತೆ ನಡೆಸಲು ಅವಕಾಶ ಸಿಕ್ಕಿದೆ. (ತಾರೀಖ್ ಅತ್ತಿಬರಿ, ಸಂಪುಟ-2, ಪುಟ-524, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಹಝ್ರತ್ ಉಮರರ ತೀಕ್ಷ್ಣ ದೃಷ್ಟಿ ಹಝ್ರತ್ ನುಅ್‌ಮಾನ್ ಬಿನ್ ಮುಖ್‌ರನ್‌ರನ್ನು ಈ ಜವಾಬ್ದಾರಿಗಾಗಿ ಆಯ್ಕೆ ಮಾಡಿತು. ಅವರು ಹಝ್ರತ್ ಪೈಗಂಬರರ(ಸ) ಶ್ರೇಷ್ಠ ಸಹಾಬಿಯರಲ್ಲಿ ಒಬ್ಬರಾಗಿದ್ದರು. (ಅಖ್ಬಾರ್ ಅತ್ತವಾಲ್, ವಖ್‌ಅತು ನಹಾವಂದ್, ಪುಟ-193, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಒಂದು ವರದಿಯಲ್ಲಿ ಹೀಗಿದೆ: ಹಝ್ರತ್ ನುಮಾನ್ ಮಸೀದಿಯಲ್ಲಿ ನಮಾಝ್ ನಿರ್ವಹಿಸುತ್ತಿದ್ದರು. ಅಲ್ಲಿಗೆ ಹಝ್ರತ್ ಉಮರ್(ರ) ಬಂದರು. ಅವರನ್ನು ನೋಡಿ ಅಲ್ಲಿ ಕುಳಿತುಕೊಂಡರು. ನುಮಾನ್ ನಮಾಝ್ ಮುಗಿಸಿದಾಗ ಹಝ್ರತ್ ಉಮರ್(ರ) ಹೇಳಿದರು: ನಾನು ನಿಮ್ಮನ್ನು ಒಂದು ಹುದ್ದೆಗೆ ನಿಶ್ಚಯಿಸಲು ಬಯಸುತ್ತೇನೆ. ಹಝ್ರತ್ ನುಮಾನ್(ರ) ಹೇಳಿದರು: ಯಾವುದಾದರೂ ಸೈನ್ಯದ ಹುದ್ದೆಯಾದರೆ ನಾನು ಹಾಜರಿದ್ದೇನೆ. ಆದರೆ ಟೇಕ್ಸ್ ಪಡೆಯುವ ಕೆಲಸವಾದರೆ ಅದು ನನಗೆ ಇಷ್ಟವಲ್ಲ. ಹಝ್ರತ್ ಉಮರ್(ರ) ಹೇಳಿದರು: ಅಲ್ಲ, ಸೈನ್ಯದ ಹುದ್ದೆಯಾಗಿದೆ. (ಫತ್‌ಹುಲ್ ಬಲದಾನ್, ಪುಟ-183, ದರುಲ್ ಕುತುಬ್ ಇಲ್‌ಮಿಯ ಬೈರೂತ್ 2000)

ಆದರೆ ತಬರಿಯ ವರದಿ ಸತ್ಯಕ್ಕೆ ಹೆಚ್ಚು ಸಮೀಪವಿದೆ ಎಂದು ತೋರುತ್ತದೆ. ನಹಾವಂದಿನ ಯುದ್ಧಕ್ಕಾಗಿ ಹಜ಼್ರತ್ ನುಮಾನ್ ಬಿನ್ ಮುಕ್‌ರನ್‌ರನ್ನು ನಿಶ್ಚಯಿಸುವುದರ ಕುರಿತು ತಬರಿಯಲ್ಲಿ ಹೀಗೆ ಬರೆಯಲಾಗಿದೆ. ಇಬ್ನು ಇಸ್‌ಹಾಖ್ ಹೇಳುತ್ತಾರೆ: ನಹಾವಂದಿನ ಘಟನೆಯಲ್ಲಿ ಹೀಗೆಯೂ ಪ್ರಸ್ತಾಪಿಸಲಾಗಿದೆ. ನುಮಾನ್ ಬಿನ್ ಮುಕ್‌ರನ್ ಕಸ್ಕರ್‌ನ ಅಧಿಕಾರಿಯಾಗಿ ನಿಶ್ಚಯಿಸಲ್ಪಟ್ಟಿದ್ದರು. ಅವರು ಹಜ಼್ರತ್ ಉಮರ್‌ರಿಗೆ ಹೀಗೆ ಪತ್ರ ಬರೆದರು: ಸಅದ್ ಬಿನ್ ಅಬೀ ವಖಾಸ್ ನನಗೆ ಟ್ಯಾಕ್ಸ್ ವಸೂಲು ಮಾಡುವ ಕೆಲಸ ನೀಡಿರುವರು. ಆದರೆ ನನಗೆ ಜಿಹಾದ್ ಇಷ್ಟ. ಹೀಗೆ ಹಜ಼್ರತ್ ಉಮರ್(ರ) ಸಅದ್ ಬಿನ್ ಅಬೀ ವಖಾಸ್‌ರಿಗೆ ಹೀಗೆ ಬರೆದರು: ನುಮಾನ್‌ರನ್ನು ನೀವು ಟ್ಯಾಕ್ಸ್ ವಸೂಲು ಮಾಡಲು ನಿಶ್ಚಯಿಸಿದ್ದೀರಿ ಎಂದು ಅವರು ನನಗೆ ಬರೆದಿರುವರು. ಆದರೆ ಅವರಿಗೆ ಆ ಕೆಲಸ ಇಷ್ಟವಲ್ಲ. ಜಿಹಾದ್ ಮಾಡಲು ಅವರಿಗೆ ಇಷ್ಟ. ಆದ್ದರಿಂದ ಅವರನ್ನು ನಹಾವಂದಿನ ಮುಖ್ಯವಾದ ಯುದ್ಧಕ್ಕಾಗಿ ಕಳುಹಿಸಿರಿ. ಒಟ್ಟಿನಲ್ಲಿ ಈ ಮುಖ್ಯವಾದ ಸೇನಾಧಿಪತಿ ಸ್ಥಾನ ಅವರಿಗೆ ಒಪ್ಪಿಸಲಾಗಿತ್ತು. ಅವರು ಶತ್ರುಗಳನ್ನು ಎದುರಿಸಲು ರವಾನೆಯಾದರು. ಅವರು ಕೂಫದಲ್ಲಿ ಇದ್ದಾಗ ಹಜ಼್ರತ್ ಉಮರ್(ರ) ಒಂದು ಪತ್ರವನ್ನು ನುಮಾನ್‌ರಿಗೆ ಬರೆದಿದ್ದರು. ಅವರು ಮದೀನದಲ್ಲಿ ಇರಲಿಲ್ಲವೆಂದು ಈ ಪತ್ರದಿಂದಲೂ ಗೊತ್ತಾಗುತ್ತದೆ. ಆ ಪತ್ರ ಹೀಗೆ ಶುರುವಾಗುತ್ತದೆ: ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಂ. ನುಅ್‌ಮಾನ್ ಬಿನ್ ಮುಖ್‌ರನಗೆ ಅಸ್ಸಲಾಮು ಅಲೈಕುಂ. ನಾನು ಅಲ್ಲಾಹನನ್ನು ಸ್ತುತಿಸುತ್ತೇನೆ. ಅವನಲ್ಲದೇ ಬೇರೆ ಆರಾಧ್ಯನಿಲ್ಲ. ನಹಾವಂದ್ ಪಟ್ಟಣದಲ್ಲಿ ಇರಾನಿಯರ ಒಂದು ಶಕ್ತಿಶಾಲಿ ಸೈನ್ಯ ನಿಮ್ಮನ್ನು ಎದುರಿಸಲು ಒಟ್ಟುಸೇರಿದೆ ಎಂದು ನನಗೆ ಮಾಹಿತಿ ಲಭಿಸಿದೆ. ನನ್ನ ಈ ಪತ್ರ ನಿನಗೆ ಲಭಿಸುವಾಗ ಅಲ್ಲಾಹನ ಆದೇಶ ಮತ್ತು ಅವನ ನೆರವು ಮತ್ತು ಸಹಾಯದೊಂದಿಗೆ ನಿಮ್ಮ ಜೊತೆಯಲ್ಲಿರುವ ಮುಸ್ಲಿಮರನ್ನು ಸೇರಿಸಿ ರವಾನೆ ಆಗಿರಿ. ಆದರೆ ನಡೆಯಲು ಕಷ್ಟಕರವಾದಂತಹ ಒಣ ಪ್ರದೇಶಗಳಲ್ಲಿ ಅವರನ್ನು ಕೊಂಡುಹೋಗದಿರು. ಅವರು ಕೃತಘ್ನತೆ ತೋರಿಸುವಂತಾಗುವ ರೀತಿಯಲ್ಲಿ ಅವರ ಹಕ್ಕುಗಳಲ್ಲಿ ಕೊರತೆ ಉಂಟುಮಾಡದಿರು. ಅದೇ ರೀತಿಯಲ್ಲಿ ಯಾವುದೇ ಕೆಸರಿನ ಪ್ರದೇಶಗಳಿಗೆ ಅವರನ್ನು ಕೊಂಡು ಹೋಗದಿರು. ಏಕೆಂದರೆ ಒಬ್ಬ ಮುಸ್ಲಿಮನು ನನಗೆ ಒಂದು ಲಕ್ಷ ದೀನಾರಿಗಿಂತಲೂ ಪ್ರಿಯವಾಗಿರುತ್ತಾನೆ. **ವಸ್ಸಲಾಂ ಅಲೈಕ್**.

ಈ ಆದೇಶವನ್ನು ಅನುಸರಿಸುತ್ತಾ ಹಜ಼್ರತ್ ನೂಮಾನ್ ಶತ್ರುಗಳನ್ನು ಎದುರಿಸಲು ರವಾನೆಯಾದರು. ಅವರೊಂದಿಗೆ ಕೆಲವು ವಿಶಿಷ್ಟ ಮತ್ತು ಧೈರ್ಯಶಾಲಿ ಮುಸ್ಲಿಮರು ಸಹ ಈ ಯುದ್ಧದಲ್ಲಿ ಭಾಗಿಯಾದರು. ಉದಾಹರಣೆಗೆ, ಹುದೈಫ ಬಿನ್ ಯಮಾನ್, ಇಬ್ನು ಉಮರ್, ಜರೀರ್ ಬಿನ್ ಅಬ್ದುಲ್ಲಾಹ್ ಬಜಲಿ, ಮುಗ್ಯೆರ ಬಿನ್ ಶೂಬ, ಅಮ್ರ್ ಬಿನ್ ಮಹ್‌ದಿ ಕರ್‌ಬ್, ತುಲೈಹ ಬಿನ್ ಖುವೈಲದ್ ಅಸದಿ, ಖೈಸ್ ಬಿನ್ ಮಖ್‌ಶೂಹ್ ಮುರಾದ್. (ತರೀಖ್ ಅತ್ತಿಬರಿ, ಸಂಪುಟ-2, ಪುಟ-518, ದರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಹಜ಼್ರತ್ ಉಮರ್(ರ) ಹೀಗೆ ನಿರ್ದೇಶನ ನೀಡಿದರು: ನೂಮಾನ್ ಶಹೀದಾದರೆ ಹುದೈಫ ಬಿನ್ ಯಮಾನ್ ಮತ್ತು ಅವರ ನಂತರ ಜರೀರ್ ಬಿನ್ ಅಬ್ದುಲ್ಲಾಹ್ ಬಜಲಿ, ಅನಂತರ ಮುಗ್ಯೆರ ಬಿನ್ ಶೂಬ, ಅನಂತರ ಅಶ್‌ಅಶ್ ಬಿನ್ ಖೈಸ್ ಅಮೀರ್ ಆಗುವರು. ಖೈಸ್ ಬಿನ್ ಮಹ್‌ದಿ ಕರ್‌ಬ್ ಮತ್ತು ತುಲೈಹ ಬಿನ್ ಖುವೈಲದ್‌ರ ಕುರಿತು ಹಜ಼್ರತ್ ಉಮರ್(ರ) ನುಮಾನ್‌ರಿಗೆ ಬರೆದರು: ಅಮ್ರ್ ಬಿನ್ ಮಹ್‌ದಿ ಕರ್‌ಬ್ ಮತ್ತು ತುಲೈಹ ಬಿನ್ ಖುವೈಲದ್ ಇಬ್ಬರೂ ನಿಮ್ಮೊಂದಿಗೆ ಇರುವರು. ಇವರಿಬ್ಬರೂ ಅರೇಬಿಯದ ಉತ್ತಮ ಕುದುರೆ ಸವಾರರಾಗಿರುವರು. ಅವರಿಂದ ಯುದ್ಧದ ಬಗ್ಗೆ ಸಲಹೆಗಳನ್ನು ಪಡೆಯುತ್ತಿರು. ಆದರೆ ಅವರನ್ನು ಯಾವುದೇ ಕೆಲಸದ ಅಧಿಕಾರಿಯನ್ನಾಗಿ ಮಾಡಬೇಡಿರಿ. (ಅಖ್ಬಾರ್ ಅತ್ತವಾಲ್, ವಖ್‌ಅತು ನಹಾವಂದ್, ಪುಟ-194, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹೇಗಿದ್ದರೂ ಇಸ್ಲಾಮಿನ ಸೈನ್ಯ ರವಾನೆಯಾಯಿತು. ನಹಾವಂದಿನ ತನಕ ಮಾರ್ಗವು ಸುರಕ್ಷಿತವಾಗಿದೆ ಎಂದು ನುಅ್‌ಮಾನ್ ಗುಪ್ತಚರರ ಮೂಲಕ ತಿಳಿದುಕೊಂಡರು. (ತಾರೀಖ್ ಅತ್ತಿಬರಿ, ಸಂಪುಟ-2, ಪುಟ-525, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಇರಾನೀ ಸೈನಿಕರ ಸಂಖ್ಯೆ ಅರುವತ್ತು ಸಾವಿರ ಅಥವಾ ಒಂದು ಲಕ್ಷವಾಗಿತ್ತು ಎಂದು ಚರಿತ್ರೆಗಾರರು ಬರೆದಿರುವರು. (ಫ಼ತೂಹುಲ್ ಬಲದಾನ್, ಪುಟ-183, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2000)

ಆದರೆ ಅವರ ಸಂಖ್ಯೆ ನಲ್ವತ್ತು ಸಾವಿರವಾಗಿತ್ತು ಎಂದು ಬುಖಾರಿಯಲ್ಲಿದೆ. (ಸಹೀಹ್ ಬುಖಾರಿ, ಕಿತಾಬುಲ್ ಜಿಝ್‌ಯವಲ್ ಮುವಾದಿಯ 3159)

ಅಂದರೆ ಅರುವತ್ತು ಸಾವಿರ ಮತ್ತು ಒಂದು ಲಕ್ಷ ಎಂದು ಹೇಳಿದ್ದು ಬುಖಾರಿಯ ಪ್ರಕಾರ ಅತಿಶಯೋಕ್ತಿಯಾಗಿದೆ. ಶತ್ರುಗಳ ಬೇಡಿಕೆ ಪ್ರಕಾರ ಮಾತುಕತೆಗಾಗಿ ಹಜ಼್ರತ್ ಮುಗ್ಯೆರ ಬಿನ್ ಶೂಬ ಹೋದರು. ಇರಾನಿಯರು ಬಹಳ ವೈಭವದಿಂದ ಸಭೆಯನ್ನು ಸಂಘಟಿಸಿದರು. ಇರಾನಿನ ಸೇನಾಧಿಪತಿ ತಲೆಯಲ್ಲಿ ಕಿರೀಟವನ್ನು ಧರಿಸಿ ಸುವರ್ಣ ಸಿಂಹಾಸನದಲ್ಲಿ ಕುಳಿತಿದ್ದರು. ಇರಾನಿನ ಸೇನಾಧಿಪತಿಯು ಹಳೆಯ ವಾಡಿಕೆಯಂತೆ ಅರೇಬಿಯರ ಜೀವಿತದ ಪ್ರತಿಂಯೊಂದು ಮಗ್ಗುಲುಗಳ ಬಗ್ಗೆ ನಿಂದನೀಯವಾದ ರೀತಿಯಲ್ಲಿ ವರ್ಣಿಸಿದನು. ಅವನು ಹೇಳಿದನು: ನಾನು ನನ್ನ ಸುತ್ತ ಇರುವ ಮುಖಂಡರೊಡನೆ ನಿಮ್ಮನ್ನು ಮುಗಿಸಲು ಆಜ್ಞಾಪಿಸುವುದಿಲ್ಲ. ಏಕೆಂದರೆ ನಿಮ್ಮ ಕೊಳಕು ಶರೀರಗಳಿಂದ ಅವರ ಈಟಿಗಳು ಕೊಳಕಾಗುವುದನ್ನು ನಾನು ಇಷ್ಟಪಡುವುದಿಲ್ಲ. ನೀವು ಈಗಲೂ ಮರಳಿ ಹೋಗುವುದಾದರೆ ನಾವು ನಿಮ್ಮನ್ನು ಬಿಟ್ಟುಬಿಡುವೆವು. ಇಲ್ಲದಿದ್ದರೆ ಯುದ್ಧ ಮೈದಾನದಲ್ಲಿ ನಿಮ್ಮ ಶವಶರೀರಗಳು ಕಾಣುವುವು. ಶತ್ರುಗಳ ಈ ಗೇಲಿಮಾತಿನಿಂದ ಏನಾಗಲು ಸಾಧ್ಯ? ಹಜ಼್ರತ್ ಮುಗ್ಯೆರ ಅದಕ್ಕೆ ಉತ್ತರ ಕೊಡುತ್ತಾ ಹೇಳಿದರು: ಈಗ ಆ ಕಾಲ ಹೊರಟು ಹೋಯಿತು. ಹಜ಼್ರತ್ ಪೈಗಂಬರರ(ಸ) ಆಗಮನವು ಅರೇಬಿಯದ ರೂಪವನ್ನೇ ಬದಲಾಯಿಸಿದೆ. (ತಾರೀಖ್ ಅತ್ತಿಬರಿ, ಸಂಪುಟ-2, ಪುಟ-520, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಹೇಗಿದ್ದರೂ ಈ ರಾಯಭಾರ ವಿಫಲಗೊಂಡಿತು. ಯುದ್ಧದ ಆರಂಭದಲ್ಲಿ ಸೆಣಸಾಟ ಶುರುವಾಯಿತು. ಯುದ್ಧ ಭೂಮಿಯ ಸ್ಥಿತಿ ಮುಸ್ಲಿಮರಿಗೆ ಅತ್ಯಂತ ಅಪಾಯಕಾರಿಯಾಗಿತ್ತು. ಶತ್ರುಗಳು ಕಂದಕಗಳು, ಕೋಟೆಗಳು ಮತ್ತು ಕಟ್ಟಡಗಳ ಕಾರಣದಿಂದ ಸುರಕ್ಷಿತರಾಗಿದ್ದರು. ಮುಸ್ಲಿಮರು ತೆರೆದ ಮೈದಾನದಲ್ಲಿದ್ದರು. ಶತ್ರುಗಳು ತಕ್ಕುದಾದ ಸಂದರ್ಭಗಳಲ್ಲಿ ಹೊರಗೆ ಬಂದು ಅಚಾನಕ್ಕಾಗಿ ದಾಳಿ ನಡೆಸುತ್ತಿದ್ದರು. (ತಾರೀಖ್ ಅತ್ತಿಬರಿ, ಸಂಘುಟ-2, ಪುಟ-526, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಇಂತಹ ವಿಷಮಕರವಾದ ಸ್ಥಿತಿಯಲ್ಲಿ ಇಸ್ಲಾಮಿನ ಸೈನ್ಯದ ಅಮೀರ್ ನುಅ್‌ಮಾನ್ ಬಿನ್ ಮುಖ್‌ರನ್ ಸಮಾಲೋಚನೆಗಾಗಿ ಸಭೆಯನ್ನು ನಡೆಸಿದರು. ವಿವಿಧ ಅಭಿಪ್ರಾಯಗಳ ನಂತರ ತುಲೈಹರ ಕಡೆಯಿಂದ ಈ ಒಂದು ಅಭಿಪ್ರಾಯ ಮುಂದೆ ಬಂತು: ಶತ್ರುಗಳ ಕಡೆಗೆ ಒಂದು ಸಣ್ಣ ಸೈನ್ಯವನ್ನು ಕಳುಹಿಸಬೇಕು. ಅವರು ಬಿಲ್ಲುಗಾರಿಕೆಯ ಮೂಲಕ ಯುದ್ಧವನ್ನು ಹೊತ್ತಿಸಬೇಕು. ಶತ್ರುಗಳು ಹೋರಾಟಕ್ಕಾಗಿ ಹೊರಟರೆ ಮುಸ್ಲಿಮರ ಈ ಸಣ್ಣ ಸೈನ್ಯ ಸೋತು ಹೋಗುವಂತೆ ತೋರಿಸಬೇಕು. ವಿಜಯದ ಆಸೆಯಿಂದ ಶತ್ರುಗಳು ಇನ್ನೂ ಮುಂದಕ್ಕೆ ಬರುವರು ಮತ್ತು ಅವರು ಹೊರಗೆ ತೆರೆದ ಮೈದಾನಕ್ಕೆ ಬರುವಾಗ ನಾವು ಅವರನ್ನು ಸರಿಯಾಗಿ ಹಿಡಿಯುವೆವು. (ತರೀಖ್ ಅತ್ತಿಬರಿ, ಸಂಪುಟ-2, ಪುಟ-526, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಈ ಸಲಹೆಯನ್ನು ಕಾರ್ಯಗತಗೊಳಿಸಲು ಹಜ಼್ರತ್ ನೂಮಾನ್(ರ) ಹಜ಼್ರತ್ ಖಅ್‌ಖಾಅ್‌ರನ್ನು ಆಯ್ಕೆ ಮಾಡಿದರು. ಅವರು ತುಲೈಹರ ಸಲಹೆಯಂತೆ ನಡೆದಾಗ ತುಲೈಹ ಯೋಚಿಸಿದಂತೆಯೇ ನಡೆಯಿತು. ಹಜ಼್ರತ್ ನುಅ್‌ಮಾನ್ ಪೈಗಂಬರರ(ಸ) ಪ್ರೇಮಿಯಾಗಿದ್ದರು. ಬೆಳಿಗ್ಗೆ ಯುದ್ಧ ಶುರುವಾಗದಿದ್ದರೆ ಮಧ್ಯಾಹ್ನದ ನಂತರ ಹಜ಼್ರತ್ ಪೈಗಂಬರ್(ಸ) ಯುದ್ಧದ ತಯಾರಿ ನಡೆಸುತ್ತಿದ್ದರು. ಶತ್ರುಗಳ ಸೈನ್ಯ ಮುಂದಕ್ಕೆ ಧಾವಿಸಿ ಇಸ್ಲಾಮಿನ ಸೈನ್ಯದ ಸಮೀಪ ತಲುಪಿದಾಗ ಅನೇಕ ಮುಸ್ಲಿಂ ಸಿಪಾಯಿಗಳು ಹೋರಾಟಕ್ಕಾಗಿ ವ್ಯಾಕುಲಗೊಂಡು ಹಜ಼್ರತ್ ನುಅ್‌ಮಾನ್‌ರ ಬಳಿಗೆ ಅನುಮತಿಗಾಗಿ ತಲುಪಿದರು. ಹಜ಼್ರತ್ ನುಅ್‌ಮಾನ್(ರ) ಅನುಮತಿ ಕೊಡಲಿಲ್ಲ. ಅನೇಕ ಮುಖ್ಯ ಸರದಾರರು ಸಹ ಹೋರಾಟಕ್ಕಾಗಿ ಅನುಮತಿ ಕೊಡಲು ಅವರಿಗೆ ಸಲಹೆ ನೀಡಿದರು. ಆದರೆ ಅವರು ಸಹನೆ ಕೈಗೊಳ್ಳಲು ಉಪದೇಶಿಸುತ್ತಿದ್ದರು.

ಮಧ್ಯಾಹ್ನ ಆದ ನಂತರ ಹಜ಼್ರತ್ ನುಅ್‌ಮಾನ್ ಪೂರ್ತಿ ಸೈನ್ಯವನ್ನು ಸುತ್ತಿ ನೋಡಿದರು ಮತ್ತು ಅತ್ಯಂತ ನೋವುಭರಿತ ಪದಗಳೊಂದಿಗೆ ಭಾಷಣ ಮಾಡಿದರು. ತನ್ನ ಶಹಾದತಿಗಾಗಿ ದುಆ ಮಾಡಿದರು ಅದನ್ನು ಕೇಳಿ ಜನರು ಅಳಲು ಆರಂಭಿಸಿದರು. ಅನಂತರ ಅವರು ಹೀಗೆ ನಿರ್ದೇಶನ ನೀಡಿದರು: ನಾನು ಮೂರು ಬಾರಿ ತಕ್ಬೀರ್ ಹೇಳುವೆನು. ಅದರೊಂದಿಗೆ ಧ್ವಜವನ್ನು ಹಾರಿಸುವೆನು. ಮೊದಲ ಬಾರಿಗೆ ಎಲ್ಲರೂ ತಯಾರಾಗಿರಿ. ಎರಡನೇ ಬಾರಿಗೆ ಆಯುಧಗಳನ್ನು ತಯಾರಾಗಿಸಿ

ಇಡಿರಿ ಮತ್ತು ಶತ್ರುಗಳ ಮೇಲೆ ಹಲ್ಲೆ ನಡೆಸಲು ತಯಾರಾಗಿ ಇರಿ. ಮೂರನೇ ಬಾರಿ ತಕ್ಬೀರ್ ಹೇಳುವಾಗ ಮತ್ತು ಧ್ವಜವನ್ನು ಬೀಸುವಾಗ ನಾನು ಶತ್ರುಗಳ ಪಂಕ್ತಿಗಳಿಗೆ ಹೋಗುವೆನು. ನಿಮ್ಮಲ್ಲಿ ಪ್ರತಿಯೊಬ್ಬರು ತಮ್ಮ ಮುಂದೆ ಇರುವ ಪಂಕ್ತಿಗಳ ಮೇಲೆ ಹಲ್ಲೆ ನಡೆಸಿರಿ. ಅನಂತರ ಅವರು ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ನಿನ್ನ ದೀನಿಗೆ ಗೌರವ ನೀಡು, ನಿನ್ನ ದಾಸರಿಗೆ ಸಹಾಯ ಮಾಡು ಮತ್ತು ಅದರ ಬದಲಿಗೆ ನುಮಾನ್‌ರಿಗೆ ಮೊದಲ ಶಹೀದ್ ಆಗಲು ಸೌಭಾಗ್ಯ ನೀಡು. ಹಝ್ರತ್ ನುಮಾನ್ ಮೂರನೇ ಬಾರಿ ತಕ್ಬೀರ್ ಹೇಳಿದಾಗ ಮುಸ್ಲಿಮರು ಮುಸ್ಲಿಮರು ಶತ್ರುಗಳ ಪಂಕ್ತಿಗಳ ಮೇಲೆ ದಾಳಿ ನಡೆಸಿದರು. ವರದಿಗಾರ ಹೀಗೆ ಹೇಳುತ್ತಾರೆ: ಆವೇಶದ ಎಂತಹ ಸ್ಥಿತಿಯಾಗಿತ್ತು ಎಂದರೆ, ಪ್ರತಿಯೊಬ್ಬರು ಸಾಯಲು ಅಥವಾ ವಿಜಯ ಗಳಿಸಿ ಮರಳಿ ಬರಲು ಅಲ್ಲದೇ ಬೇರೇನೂ ಯೋಚಿಸುತ್ತಿರಲಿಲ್ಲ.

ಹಝ್ರತ್ ನುಅ್‌ಮಾನ್ ಅತ್ಯಂತ ಧೈರ್ಯದಿಂದ ಹೋರಾಡುತ್ತಾ ಶಹೀದ್ ಆದರು. ಆದರೆ ಯುದ್ಧದ ಪರಿಣಾಮ ಗೊತ್ತಾಗುವ ತನಕ ಅವರು ಶಹೀದ್ ಆದದ್ದನ್ನು ಹಝ್ರತ್ ಹುಧೈಫ ಬಿನ್ ಯಮಾನ್ ಮತ್ತು ನಈಂ ಬಿನ್ ಮಖ್‌ರನ್ ರಹಸ್ಯವಾಗಿ ಇರಿಸಿದರು. ಇನ್ನೊಂದು ವರದಿಯಲ್ಲಿ ಮಅ್‌ಖಲ್ ವರದಿ ಮಾಡುತ್ತಾರೆ: ವಿಜಯದ ನಂತರ ನಾನು ಹಝ್ರತ್ ನುಅ್‌ಮಾನ್‌ರ ಬಳಿಗೆ ಹೋದೆನು. ಅವರಲ್ಲಿ ಜೀವಕಳೆ ಬಾಕಿಯಿತ್ತು. ಅಲ್ಲಾಹನ ಕಡೆಯಿಂದ ವಿಜಯ ಲಭಿಸಿದೆ ಎಂದು ಅವರು ನನ್ನೊಡನೆ ಕೇಳಿದಾಗ ಹೇಳಿದೆ. ಆಗ ಅವರು ಹೇಳಿದರು: ಹಝ್ರತ್ ಉಮರ್‌ರಿಗೆ ತಿಳಿಸಿರಿ. (ಫತ್‌ಹುಲ್ ಬಲದಾನ್, ಪುಟ–183, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2000)

ಹಝ್ರತ್ ಉಮರ್(ರ) ಬಹಳ ತಳಮಳದಿಂದ ಯುದ್ಧದ ಪರಿಣಾಮವನ್ನು ಕಾಯುತ್ತಿದ್ದರು. ಯುದ್ಧ ನಡೆಯಲು ಸಾಧ್ಯವಿದ್ದ ರಾತ್ರಿ ಹಝ್ರತ್ ಉಮರ್(ರ) ಅತ್ಯಂತ ಕಳವಳದೊಂದಿಗೆ ನಿದ್ದೆ ಮಾಡದೇ ರಾತ್ರಿ ಕಳೆದರು. ಪ್ರಸವ ವೇದನೆಯನ್ನು ಅನುಭವಿಸುವ ಸ್ತ್ರೀಯ ಹಾಗೆ ನೋವಿನಿಂದ ದುಆ ಮಾಡುವುದರಲ್ಲಿ ಅವರು ನಿರತರಾಗಿದ್ದರು ಎಂದು ತೋರುತ್ತಿತ್ತು. ವಿಜಯದ ಸುವಾರ್ತೆಯನ್ನು ತರುತ್ತಾ ದೂತ ಮದೀನಕ್ಕೆ ತಲುಪಿದರು. ಹಝ್ರತ್ ಉಮರ್(ರ) ಅಲ್‌ಹಮ್ದುಲಿಲಾಹ್ ಎಂದು ಹೇಳಿದರು ಮತ್ತು ನುಅ್‌ಮಾನನ ಕ್ಷೇಮದ ಬಗ್ಗೆ ಕೇಳಿದರು. ಅವರ ನಿಧನದ ವಾರ್ತೆಯನ್ನು ದೂತನು ಹೇಳಿದಾಗ ಹಝ್ರತ್ ಉಮರ್(ರ) ಬಹಳ ದುಃಖಿಗೊಂಡರು ಮತ್ತು ತಲೆಯಲ್ಲಿ ಕೈಯಿಟ್ಟು ಅಳುತ್ತಿದ್ದರು. (ತಾರೀಖ್ ಅತ್ತಿಬರಿ, ಸಂಪುಟ–2, ಪುಟ–521, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012) (ಫತ್‌ಹುಲ್ ಬಲದಾನ್, ಪುಟ–184, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2000)

ದೂತನು ಇತರ ಶಹೀದರ ಹೆಸರನ್ನು ಹೇಳಿದರು ಮತ್ತು ಹೀಗೆ ಹೇಳಿದರು: ಅಮೀರುಲ್ ಮೂಅ್‌ಮಿನೀನ್ ಬೇರೆಯೂ ಅನೇಕ ಮುಸ್ಲಿಮರು ಶಹೀದ್ ಆಗಿರುವರು. ಅವರು ನಿಮಗೆ ಪರಿಚಯವಿಲ್ಲ. ಹಝ್ರತ್ ಉಮರ್(ರ) ಅಳುತ್ತಾ ಹೇಳಿದರು: ಅವರು ಉಮರಿಗೆ ಪರಿಚಯವಿಲ್ಲವಾದರೆ ಏನೂ ನಷ್ಟವಿಲ್ಲ. ಅಲ್ಲಾಹನು ಅವರನ್ನು ಅರಿಯುತ್ತಾನೆ.( ತಾರೀಖ್ ಅತ್ತಿಬರಿ, ಸಂಪುಟ–2, ಪುಟ–521, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಅವರು ಮುಸ್ಲಿಮರ ಎಡೆಯಲ್ಲಿ ಪ್ರಸಿದ್ಧರಲ್ಲವಾಗಿರಬಹುದು ಆದರೆ ಅಲ್ಲಾಹನು ಅವರಿಗೆ ಶಹಾದತ್ ನೀಡಿ ಗೌರವಿಸಿದ್ದಾನೆ. ಅಲ್ಲಾಹನು ಅವರನ್ನು ಅರಿಯುತ್ತಾನೆ. ಉಮರ್ ಅವರನ್ನು ಅರಿಯುವುದರಿಂದ ಏನು ಪ್ರಯೋಜನ. ಯುದ್ಧದ ನಂತರ ಮುಸ್ಲಿಮರು ಹಮ್‌ಝಾನ್ ತನಕ ಶತ್ರುಗಳನ್ನು ಹಿಂಬಾಲಿಸಿದರು. ಇದನ್ನು ನೋಡಿ ಆ ಪಟ್ಟಣಗಳಿಂದ ಮುಸ್ಲಿಮರ ಮೇಲೆ ದಾಳಿ ನಡೆಯದು ಎಂಬ ಭರವಸೆಯ ಮೇರೆಗೆ ಇರಾನಿನ ಸರ್ದಾರ ಖುಸ್‌ರೂ ಶುನೂಮ್ ಸಂಧಾನ ಮಾಡಿದರು. ಇಸ್ಲಾಮಿನ ಸೈನ್ಯ ನಹಾವಂದ್ ಪಟ್ಟಣವನ್ನು ವಶಪಡಿಸಿದರು. (ತಾರೀಖ್ ಅತ್ತಿಬರಿ, ಸಂಪುಟ–2, ಪುಟ–528, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ನಹಾವಂದಿನ ವಿಜಯ ಪರಿಣಾಮಗಳ ದೃಷ್ಟಿಯಲ್ಲಿ ಬಹಳ ಮುಖ್ಯವಾಗಿತ್ತು. ಇದರ ನಂತರ ಇರಾನಿಯರಿಗೆ ಒಂದು ಜಾಗದಲ್ಲಿ ಒಟ್ಟುಸೇರಿಕೊಂಡು ಯುದ್ಧ ಮಾಡುವ ಅವಕಾಶ ಸಿಗಲಿಲ್ಲ. ಮುಸ್ಲಿಮರು ಈ ಜಾಗವನ್ನು ಫತಹುಲ್‌ಫುತೂಹ್ ಎಂಬ ಹೆಸರಿನಿಂದ ನೆನಪಿಡಲು ತೊಡಗಿದರು. (ಫತೂಹುಲ್ ಬಲದಾನ್, ಪುಟ–184, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2000)

ಇರಾನಿನ ಮೇಲೆ ದಾಳಿಯ ಅಭಿಪ್ರಾಯ ಹೇಗೆ ಆಯಿತು ಎಂಬುದರ ಬಗ್ಗೆ ಹೀಗೆ ಬರೆಯಲಾಗಿದೆ. ನೈತಿಕ ಮತ್ತು ಕಾನೂನಿನ ದೃಷ್ಟಿಯಲ್ಲಿ ಮುಸ್ಲಿಮರಿಗೆ ಇರಾನಿನ ಅಕ್ರಮಕಾರಿ ಶಕ್ತಿಯನ್ನು ಪೂರ್ಣವಾಗಿ ಮುರಿಯಲು ಅಧಿಕಾರವಿತ್ತು. ಏಕೆಂದರೆ ಶತ್ರುಗಳು ಪದೇ ಪದೇ ದಾಳಿ ನಡೆಸುತ್ತಿದ್ದರು. ಹಝ್ರತ್ ಉಮರರ ನೋವುಭರಿತ ಹೃದಯ ಹೆಚ್ಚಿನ ರಕ್ತಹರಿಸುವಿಕೆಯನ್ನು ಇಷ್ಟಪಡುತ್ತಿರಲಿಲ್ಲ. ರಹ್ಮತುಲ್ಲಿಲ್ ಆಲಮೀನ್‌ರಾದ ಹಝ್ರತ್ ಪೈಗಂಬರ್(ಸ) ಸತ್ಯಸೇವಕನ ಬಯಕೆಯೇನಾಗಿತ್ತೆಂದರೆ, ಇರಾನಿ ಆಡಳಿಕ ಗಡಿಪ್ರದೇಶಗಳಲ್ಲೆ ಸೋತು ಹೆಚ್ಚಿನ ಸೈನಿಕ ಕಾರ್ಯಚರಣೆಯನ್ನು ಕೊನೆಗೊಳಿಸಲಿ ಎಂದಾಗಿತ್ತು. ಈ ಯುದ್ಧದ ಪರಂಪರೆ ಕೊನೆಗೊಳ್ಳಬೇಕು ಎಂದಾಗಿತ್ತು. ಹಝ್ರತ್ ಉಮರ್(ರ) ಈ ಬಯಕೆಯನ್ನು ಅನೇಕ ಬಾರಿ ವ್ಯಕ್ತಪಡಿಸಿದರು ಎಂದು ಮಾತ್ರವಲ್ಲ, ಇರಾನ್ ಮತ್ತು ಇರಾಕಿನಲ್ಲಿದ್ದ ಮುಸ್ಲಿಮ್ ಸೈನ್ಯ ಸ್ವತಃ ದಾಳಿ ಮಾಡುವುದನ್ನು ತಡೆದಿದ್ದರು. ಆದರೆ ಶತ್ರುಗಳ ಹೆಚ್ಚಿನ ಸೈನಿಕ ಕಾರ್ಯಚರಣೆಗಳು ಮತ್ತು ಮುಸ್ಲಿಮರು ವಿಜಯ ಸಾಧಿಸಿದ ಪ್ರದೇಶಗಳಲ್ಲಿ ಪದೇ ಪದೇ ದಂಗೆ ಮಾಡುತ್ತಿದ್ದ ಕಾರಣದಿಂದ ಅವರ ಈ ಬಯಕೆ ಈಡೇರಲಿಲ್ಲ. ಯುದ್ಧ ಮೈದಾನದಿಂದ ಬಂದ ಸಲಹೆಗಾರರ ಒಂದು ಸಂಘದೊಂದಿಗೆ ಮಾತುಕತೆ ನಡೆಸಿದಾಗ, ಹೆಚ್ಚಿನ ಸೈನಿಕ ಕಾರ್ಯಚರಣೆ ನಡೆಸದೇ ಬೇರೆ ಮಾರ್ಗವಿಲ್ಲವೆಂಬ ತೀರ್ಮಾನಕ್ಕೆ ಹಝ್ರತ್ ಉಮರ್(ರ) ಬಂದರು. ಇದು ಹಿಜರೀ 17ರ ಸಂಗತಿಯಾಗಿದೆ. ಹೀಗಿದ್ದರೂ ಅವರು ಒಂದು ದೀರ್ಘಕಾಲದ ತನಕ ಸೈನ್ಯಗಳಿಗೆ ಮುಂದೆ ಹೋಗಲು ಅನುಮತಿ ನೀಡಲಿಲ್ಲ. ಆದರೆ ಸ್ಥಿತಿಗತಿಗಳು ಮೊದಲು ಪ್ರಸ್ತಾಪಿಸಲಾದ ಹಾಗೆ ಹೆಚ್ಚಿನ ಸಹನೆಗೆ ಅನುಮತಿ ನೀಡುತ್ತಿರಲಿಲ್ಲ. ಯಝ್‌ದಿಜರ್ ಪ್ರತಿ ವರ್ಷ ನಿರಂತರವಾಗಿ ಸೈನ್ಯವನ್ನು ಕಳುಹಿಸಿ ಯುದ್ಧವನ್ನು ಹೊತ್ತಿಸಲು ಕಾರಣವಾಗುತ್ತಿದ್ದಾನೆ ಎಂದು ಹಝ್ರತ್ ಉಮರ್(ರ) ನೋಡಿದ್ದರು. ಅವನು ಅಧಿಕಾರದಲ್ಲಿ ಇರುವ ತನಕ ಈ ರೀತಿಯನ್ನು ಬದಲಾಯಿಸದು ಎಂದು ಜನರು ಪದೇ ಪದೇ ಹಝ್ರತ್ ಉಮರ್‌ರೊಡನೆ ಹೇಳುತ್ತಿದ್ದರು. ಈಗ ನಹಾವಂದಿನ ಯುದ್ಧ ಈ ಅಭಿಪ್ರಾಯವನ್ನು ದೃಢಪಡಿಸಿತು. ಈ ಸ್ಥಿತಿಯ ಕಾರಣದಿಂದ ಯಾವುದೇ ನಿರ್ವಾಹವಿಲ್ಲದೇ ಹಝ್ರತ್ ಉಮರ್(ರ) ನಹಾವಂದ್ ಯುದ್ಧದ ನಂತರ ಹಿಜರೀ 21ರಲ್ಲಿ ಸೈನಿಕ ದಾಳಿ ನಡೆಸಲು ಅನುಮತಿ ಕೊಟ್ಟರು. ಸಂಪೂರ್ಣ ಇರಾನಿನ ಮೇಲೆ ಜಯ ಸಾಧಿಸಲು ಪ್ಲಾನ್ ಮಾಡಿ ಕೂಫಗೆ ಕಳುಹಿಸಿದರು. ಹಝ್ರತ್ ಉಮರ್(ರ) ಇರಾನಿನ ವಿವಿಧ ಪ್ರದೇಶಗಳಿಗೆ ಬೇರೆ ಬೇರೆ ಸೇನಾಧಿಪತಿಗಳನ್ನು ನಿಶ್ಚಯಿಸಿದರು ಹಾಗೂ ಮದೀನದಿಂದ ಸ್ವತಃ ಧ್ವಜಗಳನ್ನು ಮಾಡಿಸಿ ಕಳುಹಿಸಿದರು. ಖುರಾಸಾನನ ಧ್ವಜ ಅಹ್‌ನಫ್ ಬಿನ್ ಖೈಸ್‌ರಿಗೆ, ಅಸ್ತಖುರಿನ ಧ್ವಜ ಉಸ್ಮಾನ್ ಬಿನ್ ಅಬೂ ಆಸ್‌ರಿಗೆ, ಉರದ್‌ಶೇರ್ ಮತ್ತು ಸಾಬೂರಿನ ಧ್ವಜ ಮಜಾಮಿ ಬಿನ್ ಮಸ್‌ಊದ್‌ರಿಗೆ, ಫಸಾಹ್ ಮತ್ತು ದಾರುಲ್‌ಬಜರಿನ ಧ್ವಜ ಸಾರಿಯ ಬಿನ್ ಝುನೀಮ್‌ರಿಗೆ, ಸಜಿಸ್ತಾನಿನ ಧ್ವಜ ಆಸಿಂ ಬಿನ್ ಅಮ್‌ರಿಗೆ, ಮಕ್‌ರಾನಿನ ಧ್ವಜ ಹಕಂ ಬಿನ್ ಅಮ್‌ರಿಗೆ ಮತ್ತು ಕರ್ಮಾನಿನ ಧ್ವಜ ಸುಹೈಲ್ ಬಿನ್ ಅದ್ದಿಗೆ ನೀಡಿದರು. ಆಧ್‌ಬಾಯಿಜಾನಿನ ವಿಜಯಕ್ಕಾಗಿ ಉತ್‌ಬ ಬಿನ್ ಫರ್ಖದ್‌ರಿಗೆ ಮತ್ತು ಬಕೀರ್ ಬಿನ್ ಅಬ್ದುಲ್ಲಾಹ್‌ರಿಗೆ ಧ್ವಜ ಕಳುಹಿಸಿದರು. ಅಸ್‌ಫಹಾನಿನ ಧ್ವಜ ಅಬ್ದುಲ್ಲಾಹ್ ಬಿನ್ ಅಬ್ದುಲ್ಲಾಹ್‌ರಿಗೆ ನೀಡಿದರು. (ಪ್ರಬಂಧ: ತಾರೀಖೆ ಇಸ್ಲಾಮ್ ಬಿಅಹದಿ ಹಝ್ರತ್ ಉಮರ್(ರ), ಸಯ್ಯದ್ ಮೀರ್ ಮಹ್ಮೂದ್ ಅಹ್ಮದ್ ನಾಸಿರ್ ಸಾಹಿಬ್, ಪುಟ–164–166)

ಇಸ್ಫಹಾನ್ ವಿಜಯದ ಬಗ್ಗೆ ಇಸ್ಫಹಾನ್‌ನ ಅಭಿಯಾವನ್ನು ಅಬ್ದುಲ್ಲಾ ಬಿನ್ ಅಬ್ದುಲ್ಲಾಗೆ ವಹಿಸಲಾಗಿತ್ತು ಎಂದು ಬರೆಯಲಾಗಿದೆ. ಆತ ನಿಹಾವಾಂದ್‌ನಲ್ಲಿದ್ದಾಗ ಹಝ್ರತ್ ಉಮರ್(ರ) ಅವರಿಂದ ಇಸ್ಫಹಾನ್‌ಗೆ ತೆರಳಲು ಮತ್ತು ಅಬ್ದುಲ್ಲಾ ಬಿನ್ ವರ್ಕಾ ರಿಯಾಹಿ ಅವರನ್ನು ಪ್ರತಿಯೊಂದು ಮೊದಲ ತುಕಡಿಗೆ ಕಮಾಂಡರ್ ಆಗಿ ನೇಮಿಸುವಂತೆ ಪತ್ರವನ್ನು ಸ್ವೀಕರಿಸಿದರು. ಅಬ್ದುಲ್ಲಾ ಬಿನ್ ವರ್ಕಾ ಅಸಾದಿ ಮತ್ತು ಇಸ್ಮಾ ಬಿನ್ ಅಬ್ದುಲ್ಲಾ ಅವರಿಗೆ ಶಸ್ತ್ರಾಸ್ತ್ರಗಳ ಆಜ್ಞೆಯನ್ನು ಹಸ್ತಾಂತರಿಸಿ. ಅಬ್ದುಲ್ಲಾರವರು ಹೊರಟುಹೋದರು. ನಗರದ ಹೊರವಲಯದಲ್ಲಿ, ಇರಾನಿನ ಸೇನಾಧಿಪತಿಯಾದ ಉಸ್ತಂದರ್‌ನ ನೇತೃತ್ವದ ಇಸ್ಫಹಾನ್ ಜನರ ಸೈನ್ಯದೊಂದಿಗೆ ಮುಖಾಮುಖಿಯಾದರು. ಶತ್ರುಗಳ ಮುಂಚೂಣಿಯ ಅಧಿಕಾರಿ, ಅಂದರೆ ಮೊದಲ ತುಕಡಿಯ ಅಧಿಕಾರಿ ಬರಾಜ್ ಜಜವಿಯಾ ಎಂಬ ಅನುಭವಿ ಮುದುಕನಾಗಿದ್ದನು. ಅವನು ತನ್ನ ಸೈನ್ಯದೊಂದಿಗೆ ಮುಸ್ಲಿಮರೊಂದಿಗೆ ಹೋರಾಡಿದನು. ಭೀಕರ ಯುದ್ಧ ನಡೆಯಿತು. ಜಾರುಖುವೀಯಾ ಮುಬಾರಜ್‌ಗೆ ಕರೆ ನೀಡಿದನು. ಅಬ್ದುಲ್ಲಾ ಇಬ್ನ್ ವರ್ಕಾ ಅವನನ್ನು ವಧಿಸಿದನು. ಭೀಕರ ಯುದ್ಧದ ನಂತರ, ಶತ್ರು ಸೋಲಿಸಲ್ಪಟ್ಟರು ಮತ್ತು ಪಲಾಯನ ಮಾಡಿದರು. ಸೇನಾಧಿಪತಿಯಾದ ಉಸ್ತಂದಾರ್‌ನು ಅಬ್ದುಲ್ಲಾ ಬಿನ್ ಅಬ್ದುಲ್ಲಾರೊಂದಿಗೆ ಸಂಧಾನ ಮಾಡೊಕೊಂಡನು.

ಇಸ್ಲಾಮಿಕ್ ಸೈನ್ಯವು ವಿಶೇಷವಾಗಿ ಇಸ್ಫಹಾನ್‌ನ ಕಡೆಗೆ ಇಸ್ಫಹಾನ್ ಕಡೆಗೆ ಹೊರಟಿತು ಅದರ ಹೆಸರು ಜೈ ಎಂದಾಗಿತ್ತು ಮತ್ತು ನಗರಕ್ಕೆ ಮುತ್ತಿಗೆ ಹಾಕಲಾಯಿತು. ಒಂದು ದಿನ ನಗರದ ಆಡಳಿತಗಾರ ಫಾದೂಸುಫಾನ್ ಹೊರಬಂದನು ಮತ್ತು ಇಸ್ಲಾಮಿಕ್ ಸೇನೆಯ ಅಮೀರ್ ಅಬ್ದುಲ್ಲಾ ಬಿನ್ ಅಬ್ದುಲ್ಲಾಗೆ ಹೇಳಿದನು, ನಮ್ಮ ಪಡೆಗಳನ್ನು ಸೋಲಿಸುವುದಕ್ಕಿಂತ ನಾವು ನಮ್ಮ ನಡುವೆ ಹೋರಾಡುವುದು ಉತ್ತಮ. ಅಬ್ದುಲ್ಲಾ ಆ ಪ್ರಸ್ತಾಪವನ್ನು ಸ್ವೀಕರಿಸಿ ಹೇಳಿದರು 'ನೀವು ಮೊದಲು ಅಥವಾ ನನ್ನ ಮೇಲೆ ದಾಳಿ ಮಾಡುತ್ತೀರಾ?' ಫಾದೊಸುಫಾನ್ ಮೊದಲು ದಾಳಿ ಮಾಡಿಸದನು. ಅಬ್ದುಲ್ಲಾ ಅವನ ಮುಂದೆ ಇದ್ದರು ಮತ್ತು ಅವರ ಕುದುರೆಯ ತಡಿ ಮಾತ್ರ ಶತ್ರುಗಳಿಂದ ಕತ್ತರಿಸಲ್ಪಟ್ಟಿತು. ಅಬ್ದುಲ್ಲಾರವರು ಕುದುರೆಯ ಬೆನ್ನಿನ ಮೇಲೆ ಕುಳಿತು ಹೊಡೆಯುವ ಮೊದಲು ಅವರನ್ನು ಉದ್ದೇಶಿಸಿ ಮಾತನಾಡಿದರು. ಈಗ ಸ್ಥಿರವಾಗಿ ನೀಮತಿರು. ಫೂದುಸ್ಫಾನ್ ಹೇಳೀದನು: ನೀವು ಪರಿಪೂರ್ಣ ಮತ್ತು ಬುದ್ಧಿವಂತ ಮತ್ತು ಧೈರ್ಯಶಾಲಿ ವ್ಯಕ್ತಿಯಾಗಿದ್ದೀರಿ. ನಾನು ನಿಮ್ಮೊಂದಿಗೆ ಸಮನ್ವಯಗೊಳಿಸಲು ಮತ್ತು ನಗರವನ್ನು ನಿಮಗೆ ಹಸ್ತಾಂತರಿಸಲು ಸಿದ್ಧನದ್ದೇನೆ, ಹೀಗೆ ಅವರೊಡನೆ ಸಂಧಾನವಾಯಿತು ಮತ್ತು ಮುಸ್ಲಿಮರು ನಗರವನ್ನು ವಶಪಡಿಸಿಕೊಂಡರು. ತಬರಿಯಿಂದ ಈ ವಿಜಯವು ಹಿಜರಿ 21 ರಲ್ಲಿ ನಡೆಯಿತು ಎಂದು ತಿಳಿದುಬಂದಿದೆ.
(ತಬರಿ, ಸಂಪುಟ ಸಂಖ್ಯೆ 2, ಪುಟಗಳು 531 ರಿಂದ 532)

ಈ ಯುದ್ಧದಲ್ಲಿ ಭಾಗವಹಿಸಿದ ಇಸ್ಲಾಮಿಕ್ ಸೈನ್ಯದ ಎಮಿರೇಟ್‌ನಲ್ಲಿ ಅಬ್ದುಲ್ಲಾ ಬಿನ್ ಅಬ್ದುಲ್ಲಾ ಬದಲಿಗೆ ಅಬ್ದುಲ್ಲಾ ಬಿನ್ ಬುದೈಲ್ ಬಿನ್ ವರ್ಕಾ ಖಿರ್ಝಾಯಿ ಎಂದು ಇತಿಹಾಸಗಾರರಾದ ಬಲಾಝುರಿಯವರು ಹೆಸರಿಸಿದ್ದಾರೆ. (ಫತ್‌ಹುಲ್ ಬಲದಾನ್, ಪುಟ–188)

ಹಮರ್ಝಾನ್‌ನ ದಂಗೆ ಮತ್ತು ಮರು ವಿಜಯ. ನಹಾವಂದ್‌ನ ನಂತರ, ಮುಸ್ಲಿಮರು ಹಮರ್ಝಾನ್ ಅನ್ನು ವಶಪಡಿಸಿಕೊಂಡರು, ಆದರೆ ಹಮರ್ಝಾನರು ಸಂದಾನದ ಒಪ್ಪಂದವನ್ನು ಮುರಿದರು ಮತ್ತು ಅಝುರ್‌ಬಯಿಜಾನ್‌ನ ಸಹಾಯದಿಂದ ಸೈನ್ಯವನ್ನು ರಚಿಸಿದರು. ಹಝ್ರತ್ ಉಮರ್(ರ) ನಯೀಮ್ ಬಿನ್ ಮುಕ್ರಿನ್‌ಗೆ ಹನ್ನೆರಡು ಸಾವಿರ ಸೈನ್ಯದೊಂದಿಗೆ ಅಲ್ಲಿಗೆ ಹೋಗಲು ಸೂಚಿಸಿದರು. ಭೀಕರ ಯುದ್ಧದ ನಂತರ, ಮುಸ್ಲಿಮರು ನಗರವನ್ನು ವಶಪಡಿಸಿಕೊಂಡರು.
(ಅಲ್–ಸಲಾಬಿ ಅವರಿಂದ ಅಮೀರ್ ಅಲ್–ಮು'ಮಿನಿನ್ ಉಮರ್ ಇಬ್ನ್ ಅಲ್–ಖತ್ತಾಬ್ ಅವರ ಜೀವನಚರಿತ್ರೆಯಿಂದ ಅಳವಡಿಸಲಾಗಿದೆ, ಪು. 431, ದಾರ್ ಅಲ್–ಮಾರಿಫಾ, ಬೈರುತ್, 2007)

ಹಝ್ರತ್ ಉಮರ್(ರ)ರವರು ಈ ಯುದ್ಧದ ಫಲಿತಾಂಶದ ಬಗ್ಗೆ ವಿಶೇಳವಾಗಿ ಚಿಂತಿತರಾಗಿದ್ದರು. ದೂತನು ವಿಜಯದ ಶುಭ ಸುದ್ದಿಯನ್ನು ತಂದನು. ಹಝ್ರತ್ ಉಮರ್(ರ) ನಯೀಮ್ ಬಿನ್ ಮುಕ್ರಿನ್‌ಗೆ ಹಮರ್ಝಾನಿನಲ್ಲಿ ಯಾರನ್ನಾದರೂ ಉತ್ತರಾಧಿಕಾರಿಯನ್ನಾಗಿ ಮಾಡಲು ಮತ್ತು ಸ್ವತಃ ರೈ ಕಡೆಗೆ ಹೋಗಿ ಅಲ್ಲಿ ಸೈನ್ಯವನ್ನು ಸೋಲಿಸಿ ರೈ ನಲ್ಲಿ ಉಳಿಯಲು ಆದೇಶಿಸಿದನು. ಏಕೆಂದರೆ ಈ ಇಡೀ ಪ್ರದೇಶವು ಕೇಂದ್ರವಾಗಿದೆ. (ಪ್ರಬಂಧ: ತಾರೀಖೆ ಇಸ್ಲಾಮ್ ಬಿಅಹದಿ ಹಝ್ರತ್ ಉಮರ್(ರ), ಸಯ್ಯದ್ ಮೀರ್ ಮಹ್ಮೂದ್ ಅಹ್ಮದ್ ನಾಸಿರ್ ಸಾಹಿಬ್)

ಈಗ ಕೆಲವು ದಿವಂಗತರ ಬಗ್ಗೆ ಸಹ ಪ್ರಸ್ತಾಪಿಸುವೆನು. ಜುಮಾದ ನಂತರ ಅವರ ಜನಾಝ ಸಹ ನಿರ್ವಹಿಸುವೆನು. ಅವರಲ್ಲಿ ಮೊದಲನೆಯದ್ದು ಇಂಡೋನೇಶಿಯದ ಸನ್ಮಾನ್ಯ ಮುಹಮ್ಮದ್ ದಿಯಾನ್‌ತೂನೋ ಸಾಹಿಬ್‌ರದ್ದಾಗಿದೆ. ಜೂಲಾಯಿ 15ಕ್ಕೆ 46ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ಪತ್ನಿ ಬರೆಯುತ್ತಾರೆ: ದಿವಂಗತ ಪತಿ ಅಹ್ಮದಿಯೇತರ ಕುಟುಂಬದಲ್ಲಿ ಹುಟ್ಟಿದ್ದರು. ಆದರೆ ಅವರಿಗೆ ಚಿಕ್ಕಂದಿನಿಂದಲೇ ಮಸೀದಿಗೆ ಹೋಗುವ ಆಸಕ್ತಿ ಇತ್ತು ಮತ್ತು ಇತರ ಮಕ್ಕಳಿಂದ ಬೇರೆಯಾಗಿ ಇದ್ದರು. ದೀರ್ಘ ಸಮಯ ಮಸೀದಿಯಲ್ಲಿ ಇರುವುದು, ಇಸ್ಲಾಮಿನ ಪಾಠಗಳನ್ನು ಕಲಿಯುವುದು, ಅಲ್ಲಾಹನ ಸ್ಮರಣೆ ಮಾಡುವುದು ಅವರಿಗೆ ಇಷ್ಟವಾಗಿತ್ತು. ಅಲ್ಲಾಹನ ಸಾಮೀಪ್ಯವನ್ನು ಪಡೆಯಲು ಇವೆಲ್ಲ ಅವರಿಗೆ ಯಥಾರ್ಥ ಅನುಗ್ರಹವಾಗಿತ್ತು. ಗ್ರಾಮದಲ್ಲಿ ಅವರ ಒಬ್ಬ ಸ್ನೇಹಿತನಿದ್ದನು. ಅವರು ಅಹ್ಮದಿಯಾಗಿದ್ದರು. ಅವರು ಹೈಸ್ಕೂಲಿನಲ್ಲಿದ್ದಾಗ ಅವರ ಈ ಸ್ನೇಹಿತನಿಂದ ಜಮಾಅತಿನ ಬಗ್ಗೆ ಗೊತ್ತಾಯಿತು. ಅವರು ಚಲೀದೂ ಜಮಾಅತಿನಲ್ಲಿ ಬೈಅತ್ ಮಾಡಿದರು. ಅವರು ಬೈಅತ್ ಮಾಡಿದ್ದ ವಿವರ ಅವರ ತಂದೆಗೆ ಗೊತ್ತಾದಾಗ ಅವರು ಬಹಳ ಕೋಪಗೊಂಡರು ಮತ್ತು ಮನೆಯಿಂದ ಹೊರಗೆ ಹಾಕಿದರು. ಏಕೆಂದರೆ ಅವರ ಮಗನು ದಾರಿಗೆಟ್ಟನು ಎಂದು ಅವರು ಭಾವಿಸುತ್ತಿದ್ದರು. ಹೇಗಿದ್ದರೂ ಮನೆಯ ಬಾಗಿಲು ಸಹ ಅವರಿಗೆ ತೆರೆಯಲ್ಪಡಲಿಲ್ಲ. ಹೊರಗೆ ಅವರಿಗೆ ಮಲಗಬೇಕಾಗುತ್ತಿತ್ತು. ಸ್ವಲ್ಪ ಕಾಲ ಹೀಗೆ ಮುಂದುವರೆಯಿತು. ಅನಂತರ ಅವರು ಕ್ಷಮಿಸಿದರು. ಮನೆಗೆ ಬರಲು ಶುರುಮಾಡಿದರು. ಹೇಗಿದ್ದರೂ 1997ರಲ್ಲಿ ಲೋಕಲ್ ಜಮಾಅತಿನ ಹುದ್ದೇದಾರರು ಅವರೊಡನೆ ಜಾಮಿಅ ಹೋಗಲು ಸಲಹೆ ನೀಡಿದರು. ಏಕೆಂದರೆ ಹುದ್ದೇದಾರರ ಪ್ರಕಾರ ಅವರು ಮುಬಲ್ಲಿಗ್ ಆಗಲು ಯೋಗ್ಯರಾಗಿದ್ದರು. ಅವರಿಗೆ ಯೌವ್ವನದಿಂದಲೇ ತಬ್ಲೀಗ್ ಮಾಡುವ ಆಸಕ್ತಿಯಿತ್ತು. ಹೇಗಿದ್ದರೂ ಅವರು ಜಾಮಿಅದಲ್ಲಿ ದಾಖಲಾದರು. 2002ರಲ್ಲಿ ಜಾಮಿಅದಿಂದ ತೇರ್ಗಡೆಗೊಂಡರು. ಅವರ ಮೊದಲ ಪೋಸ್ಟಿಂಗ್ ಜೀನೇಪೋಂತ್ವಾ ಜಮಾಅತಿನಲ್ಲಿ ಆಗಿತ್ತು. ಅವರಿಗೆ ತಬ್ಲೀಗ್ ಮಾಡುವ ಅಭಿರುಚಿಯಿದ್ದ ಕಾರಣ ತಬ್ಲೀಗ್ ಮಾಡುವವರೊಡನೆ ತಬ್ಲೀಗ್ ಮಾಡಲು ಗ್ರಾಮ ಗ್ರಾಮಗಳಿಗೆ ಹೋಗುತ್ತಿದ್ದರು. ಅಲ್ಲಾಹನ ಅನುಗ್ರಹದಿಂದ ಒಂದು ಗ್ರಾಮದಲ್ಲಿ ನೂರಾರು ಬೈಅತ್‌ಗಳನ್ನು ಮಾಡಿಸಲು ಸೌಭಾಗ್ಯ ಪಡೆದರು. ಮಿಶನ್ ಹೌಸಿನ ನಿರ್ಮಾಣ ಶುರುವಾದಾಗ ಅವರು ಸ್ವತಃ ಸಹ ಕೆಲಸ ಮಾಡುತ್ತಿದ್ದರು. ಆ ಜಾಗದಲ್ಲಿ ಆ ಸಮಯದಲ್ಲಿ ಯಾವುದೇ ಮಿಶನ್ ಹೌಸ್ ಇರಲಿಲ್ಲ. ಅವರು ಪತ್ನಿ ಹೇಳುತ್ತಾರೆ: ನನಗೆ ನೆನಪಿದೆ. ನಾವು ಬಹಳ ಕಡಿಮೆ ಬಾಡಿಗೆಯ ಮನೆಯಲ್ಲಿ ಇರುತ್ತಿದ್ದೆವು. ಎಷ್ಟು ಸಾಧಾರಣವಾಗಿತ್ತು ಎಂದರೆ, ಮನೆಯಲ್ಲಿ ಸಾಮಾನುಗಳು ಸಹ ಇರಲಿಲ್ಲ. ಮನೆಯ ಒಟ್ಟು ಸಾಮಾನು ಏನಾಗಿತ್ತು ಎಂದರೆ, ಒಂದು ಕಂಬಳಿ, ಒಂದು ದಿಂಬಿಗೆ, ಒಂದು ಚಾಪೆಯಿತ್ತು. ಅದರಲ್ಲಿ ಮಲಗುತ್ತಿದ್ದೆವು. ಊಟ ತಯಾರು ಮಾಡುವ ಪಾತ್ರೆಯಲ್ಲೇ ಎಲ್ಲ ಕೆಲಸವನ್ನು ಮಾಡುತ್ತಿದ್ದೆವು. ಅದರಲ್ಲೇ ಊಟ ತಯಾರಿಸುವುದು, ಅದರಲ್ಲೇ ನೀರು ಇತ್ಯಾದಿಗಳನ್ನು ಇರಿಸುತ್ತಿದ್ದೆವು. ಒಂದು ದಿನ ರಈಸುತ್ತಬ್‌ಲೀಗ್ ಸುಯೂತಿ ಅಝೀಝ್ ಸಾಹಿಬ್ ಮತ್ತು ಸೂಬಾಯಿ ಮುಬಲ್ಲಿಗ್ ಸೈಫುಲ್ಲೈವನ್ ಸಾಹಿಬ್ ನಮ್ಮ ಮನೆಗೆ ಬಂದರು. ಮನೆಯ ಸ್ಥಿತಿಯನ್ನು ನೋಡಿ ಇಬ್ಬರೂ ಅಚ್ಚರಿಗೊಂಡರು. ಹೇಗಿದ್ದರೂ ಅದರ ನಂತರ ಜೀನೇಪೋಂತ್ವಾ ಜಮಾಅತ್ ಮಿಶನ್ ಹೌಸ್ ನಿರ್ಮಿಸಲು ಕೇಂದ್ರದೊಡನೆ ವಿನಂತಿ ಮಾಡಿತು. ಅಲ್ಲಿ ಮಿಶನ್ ಹೌಸಿನ ನಿರ್ಮಾಣವಾಯಿತು. ಅದರ ನಂತರ ಅಲ್ಲಿ ಮಸೀದಿ ಸಹ ನಿರ್ಮಾಣವಾಯಿತು. ಮೊದಲು ಈ ಜನರು ಮುಸ್ಲಿಮರ ಒಂದು ಮಸೀದಿಯಲ್ಲಿ ನಮಾಝ್ ಮಾಡುತ್ತಿದ್ದರು. ಅನಂತರ ವಿರೋಧದ ಕಾರಣದಿಂದ ಅಲ್ಲಿ ನಮಾಝ್ ನಿರ್ವಹಿಸುವುದು ನಿಂತುಹೋಯಿತು. ಅನಂತರ ಒಂದು ಮನೆಯಲ್ಲಿ ನಮಾಝ್ ನಿರ್ವಹಿಸುತ್ತಿದ್ದರು. ಮಸೀದಿ ನಿರ್ಮಾಣದಲ್ಲೂ ಅನೇಕ ಅಡೆತಡೆಗಳು ಇದ್ದುವು. ಮಸೀದಿ ಮಾಡಲು ಬಯಸಿದ್ದರು. ಮೇಸ್ತ್ರಿಗಳು ಸಹ ಕೆಲಸ ಮಾಡುವುದನ್ನು ನಿರಾಕರಿಸಿದರು. ಮಸೀದಿ ಮಾಡಲು ಬಿಡುವುದಿಲ್ಲ ಎಂದು ಗ್ರಾಮದ ಸರದಾರ ಸಹ ಬೆದರಿಕೆ ಹಾಕಿದನು. ಹೇಗಿದ್ದರೂ ಈ ಎಲ್ಲ ಅಡತಡೆಗಳಿದ್ದೂ ಅವರು ಧೈರ್ಯಗುಂದಲಿಲ್ಲ. ಬಹಳ ದೃಢನಿರ್ಧಾರದಿಂದ ಮಸೀದಿಯ ನಿರ್ಮಾಣ ಮಾಡಿಸಿದರು. ಕಾರ್ಮಿಕರು ಬರದಿದ್ದರೆ ಖುದ್ದಾಂ ಅತ್‌ಫಾಲ್‌ರಿಂದ ವಖಾರೆ ಅಮಲ್ ಮಾಡಿಸುತ್ತಿದ್ದರು. ಮಾತ್ರವಲ್ಲ ಅಹ್ಮದಿಯೇತರ ಮಕ್ಕಳು ಸಹ ಭಾಗಿಯಾಗುತ್ತಿದ್ದರು. ಹೀಗೆ ಮಸೀದಿ ನಿರ್ಮಾಣವಾಯಿತು. ಅವರ ಪತ್ನಿ ಹೇಳುತ್ತಾರೆ: ಜಕಾರ್ತದಲ್ಲಿ ಅವರ ಪೋಸ್ಟಿಂಗ್ ಆದಾಗ ಅಲ್ಲೂ ಬಹಳ ಹೆಚ್ಚು ವಿರೋಧವಿತ್ತು. ಆದರೆ ಅಲ್ಲಿ ಪ್ರವಾಹ ಬಂದಾಗ ಅದೇ ವಿರೋಧಿಯಾಗಿದ್ದ ಅಹ್ಮದಿಯೇತರರು ಅಭಯ ಪಡೆಯಲು ನಮ್ಮ ಮಸೀದಿಗೆ ಬರುತ್ತಿದ್ದರು. ಎರಡು ವರ್ಷಗಳು ನಿರಂತರವಾಗಿ ಪ್ರವಾಹ ಬರುತ್ತಿತ್ತು. ಈ ಜನರು ನಮ್ಮ ಮಸೀದಿಯಲ್ಲೇ ಅಭಯ ಪಡೆಯುತ್ತಿದ್ದರು. ಒಂದು ಕಡೆ ವಿರೋಧ ಮಾಡುತ್ತಿದ್ದರು ಅನಂತರ ಅಭಯ ಪಡೆಯಲು ಬರುತ್ತಿದ್ದರು. ಅನಂತರ ವಿಷಯ ಸ್ವಲ್ಪ ತಣ್ಣಗೆಗೊಂಡಿತು. ಅವರ ಹಿರಿಯ ಕೆಲಸಗಳಲ್ಲಿ ಒಂದು ಮುಖ್ಯವಾದ ಕೆಲಸವೇನೆಂದರೆ, ಅವರು ಇಂಡೋನೇಶಿಯದಲ್ಲಿ ರೇಡಿಯೋ ಮತ್ತು ಇಂಟರ್‌ನೆಟ್ ಮೂಲಕ ಜಮಾಅತಿನ ಸಂದೇಶ ಮತ್ತು ಖಲೀಫತುಲ್ ಮಸೀಹರ ಖುತ್ಬಗಳ ತರ್ಜುಮೆ ನೇರ ಪ್ರಸಾರವಾಗಿ ನಡೆಸುವ ವ್ಯವಸ್ಥೆ ಮಾಡಿದರು. ಆ ಸಮಯದಲ್ಲಿ ಅಲ್ಲಿ ಯೂಟ್ಯೂಬ್ ಮೂಲಕ ಖುತ್ಬದ ಲೈವ್ ತರ್ಜುಮೆ ಶುರುವಾಗಿರಲಿಲ್ಲ. ಹೇಗಿದ್ದರೂ ಜೀವನ ಪೂರ್ತಿ ಅವರು ಬಹಳ ಪರಿಶ್ರಮಪಟ್ಟರು. ಒಬ್ಬ ಮಾದರಿ ಮುಬಲ್ಲಿಗ್ ಆಗಿದ್ದರು. ದಿವಂಗತರು ಪತ್ನಿಯನ್ನಲ್ಲದೇ ಐದು ಮಕ್ಕಳನ್ನು ಅಗಲಿರುವರು. ಅಲ್ಲಾಹನು ಅವರೊಡನೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

ಎರಡನೇ ಜನಾಝ ಶಿಕಾಗೋ ಅಮೇರಿಕದ ಸನ್ಮಾನ್ಯ ಸಾಹಿಬ್‌ಝಾದ ಫರ್‌ಹಾನ್ ಲತೀಫ್ ಸಾಹಿಬ್‌ರದ್ದಾಗಿದೆ. ಅವರು ಸ್ವಲ್ಪ ಕಾಲದ ಮುಂಚೆ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ**

**ರಾಜಿಊನ್**. ಅವರು ಹಝ್ರತ್ ಸಾಹಿಬ್‌ಝಾದ ಅಬ್ದುಲ್ಲತೀಫ್ ಸಾಹಿಬ್ ಶಹೀದ್‌ರ ಮೊಮ್ಮಗನ ಮಗನಾಗಿದ್ದರು. ದಿವಂಗತರು ಶಿಕಾಗೋ ಜಮಾಅತಿನ ಕ್ರಿಯಾಶೀಲ ಮೆಂಬರ್ ಆಗಿದ್ದರು. ಸದಾ ಸಹಾಯ ಮತ್ತು ಸೇವೆಗಾಗಿ ತಯಾರಾಗಿದ್ದರು. ಮುಖದಲ್ಲಿ ಮುಗುಳ್ನಗೆ ಮತ್ತು ಸಲಾಂ ಮಾಡುವುದರಲ್ಲಿ ಮೊದಲು ಮಾಡುವುದು ಅವರ ವಿಶೇಷ ಗುಣವಾಗಿದ್ದವು. ಮಸೀದಿಯಲ್ಲ ಏನಾದರೂ ದೊಡ್ಡ ಅಥವಾ ಸಣ್ಣ ಕೆಲಸವಿದ್ದರೂ ಬೇಗನೇ ಅದನ್ನು ಮಾಡಲು ಹೋಗುತ್ತಿದ್ದರು. ಸೇವೆಗಾಗಿ ಯಾವಾಗಲೂ ಮುಂದಿರುತ್ತಿದ್ದರು. ಶಿಕಾಗೋ ಜಮಾಅತಿನಲ್ಲಿ ಆಡಿಟರ್‌ನ ಕರ್ತವ್ಯವನ್ನು ಬಹಳ ಉತ್ತಮವಾಗಿ ಮಾಡುತ್ತಿದ್ದರು. ದಿವಂಗತರು ಮೂಸಿಯಾಗಿದ್ದರು. ದಿವಂಗತರು ಮೂರು ಸಣ್ಣ ಮಕ್ಕಳನ್ನು ಮತ್ತು ವೃದ್ಧ ತಂದೆ ತಾಯಂದಿರನ್ನು ಅಗಲಿರುವರು. ಅವರ ನಿಧನದ ಸಮಯ ಅವರ ವಯಸ್ಸು 45 ಆಗಿತ್ತು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಮಕ್ಕಳನ್ನು ಸಹ ಜಮಾಅತಿನೊಂದಿಗೆ ಸದಾ ಜೋಡಿಸಿಡಲಿ.

ಮುಂದಿನ ಜನಾಝ ಲಾಹೋರಿನ ಸನ್ಮಾನ್ಯ ಮಲಿಕ್ ಮುಬಶ್ಶಿರ್ ಅಹ್ಮದ್ ಸಾಹಿಬ್‌ರದ್ದಾಗಿದೆ. ನವೆಂಬರ್ 21ರಂದು ಬಹಳ ಹಿಂದೆ ನಿಧನರಾಗಿದ್ದರು. ಆದರೆ ಅವರ ಜನಾಝ ನಿರ್ವಹಿಸಿರಲಿಲ್ಲ. ಅವರ ಜನಾಝವನ್ನು ನಿರ್ವಹಿಸಲು ಅವರ ಮಗನು ಬರೆದಿದ್ದರು. ಇವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಸಹಾಬಿ ಮತ್ತು ಖುರ್‌ಆನ್ ವ್ಯಾಖ್ಯಾನಗಾರರಾಗಿದ್ದ ಹಝ್ರತ್ ಮೌಲಾನ ಗುಲಾಂ ಫರೀದ್ ಸಾಹಿಬ್‌ರ(ರ) ಮಗನಾಗಿದ್ದರು. ಮಿಯಾನ್‌ವಾಲಿ ಜಿಲ್ಲೆಯ ದಾಊದ್ ಖೈಲ್ ಜಮಾಅತಿನಲ್ಲಿ ಅಮೀರ್ ಅಲ್ಲದೆ, ಹೈದರಾಬಾದಿನಲ್ಲಿ ಜಮಾಅತಿನ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆದಿದ್ದರು. ಪವಿತ್ರ ಖುರ್‌ಆನಿನ ನಿಘಂಟುವನ್ನು ಪೂರ್ಣಗೊಳಿಸುವುದರಲ್ಲೂ ಅವರಿಗೆ ಕೆಲಸ ಮಾಡುವ ಸಂದರ್ಭ ಸಿಕ್ಕಿತ್ತು. ಅದನ್ನು ಅವರು ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರ ನಿರ್ದೇಶನ ಪ್ರಕಾರ ಅವರ ತಂದೆಯಾದ ಮಲಿಕ್ ಗುಲಾಂ ಫರೀದ್ ಸಾಹಿಬ್‌ರ ನಿಧನದ ನಂತರ ತನ್ನ ಕಿರಿಯ ಸಹೋದರನೊಂದಿಗೆ ಸೇರಿ ಅದನ್ನು ಕ್ರಮೀಕರಿಸಿದರು. ಅಲ್ಲಾಹನು ಅವರೊಡನೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ನಾನು ಹೇಳಿದಂತೆ ಇವರೆಲ್ಲರ ಜನಾಝ ಗಾಇಬ್ ನಮಾಝ್ ಜುಮಾದ ನಂತರ ನಿರ್ವಹಿಸುವೆನು.

***********

*(ಪುಟ ಸಂಖ್ಯೆ 12ರ ಉಳಿದ ಭಾಗ)*

ದೂರವಾಗಲು ಪ್ರಾರ್ಥಿಸಲು ಹೇಳಿದರು. ಆಗ ಹುಝೂರ್ ಹೇಳಿದರು. "ಅಲ್ಲಾಹನು ಔದಾರ್ಯ ತೋರಲಿ."

* ಇನ್ನೊರ್ವ ಮಹಿಳಾ ಅತಿಥಿ ಹೇಳಿದಳು. ಈ ಸಮಯ ನಾನು ಹುಝೂರ್‌ರ ಮುಂದಿದ್ದೇನೆ. ಒರ್ವ ಮಹೋನ್ನತ ವ್ಯಕ್ತಿತ್ವದ ಮುಂದೆ. ನಾನು ಹುಝೂರ್‌ರಿಗೆ ಕೃತಜ್ಞತೆ ಅರ್ಪಿಸಬಯಸುತ್ತಿದ್ದೇನೆ. ನಮಗೆಲ್ಲ ಚೆನ್ನಾಗಿ ನೋಡಿಕೊಂಡಿದ್ದಾರೆ. ಹುಝೂರ್ ಅನ್ವರ್ ಅವರ ಭಾಷಣಗಳು ತುಂಬ ಚೆನ್ನಾಗಿದ್ದವು. ಅವು ನಮ್ಮ ಮೇಲೆ ಬಹಳ ಪ್ರಭಾವ ಬೀರಿವೆ.

ಆಗ ಹುಝೂರ್ ಹೇಳಿದರು. ಅಲ್ಲಾಹನು ಅನುಗ್ರಹಿಸಲಿ.

* Zeinba ಎಂಬ ಮಹಿಳೆಯೋರ್ವಳು ಹೇಳಿದರು. ಜಲ್ಸದಲ್ಲಿ ಭಾಗವಹಿಸಿದ ಕಾರಣ ನಮಗೆ ಧರ್ಮದ ಕುರಿತು ನಿಜವಾದ ಜ್ಞಾನ ಪ್ರಾಪ್ತವಾಗಿದೆ ಮತ್ತು ಬಹಳಷ್ಟು ಹೆಚ್ಚಿನ ಜ್ಞಾನ ದೊರೆತಿದೆ. ಹುಝೂರ್ ಅನ್ವರ್ ಅವರ ಪ್ರಕಾಶಮಯ ವ್ಯಕ್ತಿತ್ವ ನಮಗೆ ತುಂಬಾ ಪ್ರಭಾವಿತಗೊಳಿಸಿದೆ.

* ಮಿತ್ರರೊಬ್ಬರು ಸಗೀರ್ ಸಾಹಿಬ್ ಹೇಳಿದರು. ಇದು ನಾನು ಭಾಗವಹಿಸುತ್ತಿರುವ ಎರಡನೆಯ ಜಲ್ಸವಾಗಿದೆ. ಈ ಜಲ್ಸ ನನಗೆ ತುಂಬಾ ಪ್ರಾಮುಖ್ಯತೆ ಹೊಂದಿದ್ದಾಗಿದೆ. ಏಕೆಂದರೆ ಈ ಜಲ್ಸದಲ್ಲಿ ನನಗೆ ಬೈಅತ್ ಮಾಡಿ ಅಹ್ಮದಿಅತ್ ಸೇರುವ ಭಾಗ್ಯ ದೊರೆತಿದೆ. ನನ್ನ ಯಾವ ಪ್ರಶ್ನೆಯು ಇಲ್ಲ. ನಾನು ಕೇವಲ ಹುಝೂರ್ ಅನ್ವರ್‌ಗೋಸ್ಕರ ದುಆ ಮಾಡುತ್ತೇನೆ. ಅಲ್ಲಾಹನು ಹುಝೂರ್‌ರಿಗೆ ಆರೋಗ್ಯ ದಯಪಾಲಿಸಲಿ, ದೀರ್ಘಾಯುಷ್ಯ ನೀಡಲಿ. ಆಮೀನ್.

* Aldina ಎಂಬ ಮಹಿಳೆಯೋರ್ವಳು ಹೇಳಿದರು. ಇಲ್ಲಿ ಬರುವುದಕ್ಕಿಂತ ಮುಂಚೆ ಇಸ್ಲಾಂ ಧರ್ಮದ ಬಗ್ಗೆ ಏನೂ ಜ್ಞಾನವಿರಲಿಲ್ಲ. ಜಲ್ಸದಲ್ಲಿ ಭಾಗವಹಿಸಿ ಖಲೀಫತುಲ್ ಮಸೀಹ್ ಅವರ ಭಾಷಣಗಳನ್ನು ಕೇಳಿ ಇಸ್ಲಾಮಿನ ನಿಜವಾದ ಶಿಕ್ಷಣ ತಿಳಿಯುವಂತಾಯಿತು. ಇದಕ್ಕಿಂತ ಮುಂಚೆ ತಿಳಿಯದಂತಹ ವಿಷಯ ತಿಳಿಯುವಂತಾಯಿತು. ಜಲ್ಸದ ಎಲ್ಲಾ ಏರ್ಪಾಡುಗಳು ತುಂಬಾ ಚೆನ್ನಾಗಿದ್ದವು.

**(ಮುಂದುವರಿಯುವುದು)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ವರ್ಷದಲ್ಲಿ ಅವತರಿಸಿದೆ. ಹೊಸ ಅಧ್ಯಯನ ಮಾಡಿದ ಅರಬರು ಮತ್ತು ಯುರೋಪಿಯನ್ ಲೇಖಕರು ವ್ಯಾಖ್ಯಾನಗಾರರ ಜೊತೆಗೂಡಿ ಸಹಮತದೊಂದಿಗೆ ಹೇಳುತ್ತಾರೆ. ಈ ಅಧ್ಯಾಯ ಮಕ್ಕದಾಗಿದೆ ಎಂದು. ಮಕ್ಕ ಜೀವನದ ಅಂತಿಮ ವರ್ಷಗಳು ತುಂಬಾ ಅಪಾಯಕರವಾಗಿದ್ದವು. ಹಝ್ರತ್ ರಸೂಲುಲ್ಲಾಹ್(ಸ) ತನ್ನ ಸಂಗಡಿಗರ ಸಮೇತ ಶುಅಬ್ ಅಬೀ ತಾಲಿಬ್‌ನಲ್ಲಿ ಸೆರೆಯಾಗಿದ್ದರು. ಅದಾಗ್ಯೂ ಮುಸಲ್ಮಾನರಿಗೆ ತಮ್ಮ ಸುರಕ್ಷತೆಗಾಗಿ ಯಾವ ಸ್ಥಳವು ದೊರೆಯುತ್ತಿರಲಿಲ್ಲ. ಅಂತಹ ಸಮಯದಲ್ಲಿ ಅಲ್ಲಾಹನ ಈ ನುಡಿ. ದೇವದೂತರ ಅಗತ್ಯವೇನಿದೆ, ಸ್ವಯಂ ನಾವು ಅದರ ರಕ್ಷಣೆ ಮಾಡುವೆವು ಎಂಬುದು ಎಷ್ಟೊಂದು ಮಹತ್ತರ ಹಾಗೂ ವೈಭವಯುತ ದಾವೆಯಾಗಿದೆ. ಈ ವಾಕ್ಯದ (ಇನ್ನಾ ನಹನು) ಮಹತ್ವ ಅರಬಿ ತಿಳಿದವರೇ ಚೆನ್ನಾಗಿ ಬಲ್ಲರು. ಅದು ಅದ್ಭುತಕರ ಮಾತಾಗಿರದೆ ಮುಸಲ್ಮಾನರು ಸ್ವಯಂ ಸೆರೆವಾಸ ಅನುಭವಿಸುತ್ತಿದ್ದಾರೆ. ಅವರ ಜೀವ ಉಳಿಯುವುದೇ ಕಷ್ಟಕರವಾಗಿದೆ, ಹೇಳಲಾಗುತ್ತದೆ. ನೀವು ಎಲ್ಲಾ ಶಕ್ತಿಗಳನ್ನು ಉಪಯೋಗಿಸಿಕೊಳ್ಳಿರಿ ಮತ್ತು ಪವಿತ್ರ ಖುರ್‌ಆನ್‌ನ್ನು ಅಳಿಸಲು ತನ್ನೆಲ್ಲಾ ಶಕ್ತಿ ಖರ್ಚು ಮಾಡಿರಿ, ಸ್ವಯಂ ನಾವು ಅದರ ರಕ್ಷಣೆ ಮಾಡುವೆವು. ಒಂದು ದಿನ ಹೀಗೆ ಬರುತ್ತದೆ, ಈ ಎಲ್ಲಾ ವಿರೋಧಗಳ ನಡುವೆಯೂ ಹಝ್ರತ್ ರಸೂಲುಲ್ಲಾಹ್(ಸ) ಮತ್ತು ಅವರ ಸಂಗಡಿಗರು ಬಿಡುಗಡೆ ಹೊಂದುತ್ತಾರೆ. ಅವರಿಗೆ ಪ್ರಗತಿ ದೊರೆಯುತ್ತದೆ. ಒಂದು ಮಹೋನ್ನತವಾದ ಜಮಾಅತ್ ಸುರಕ್ಷತೆಯಾಗಿರುತ್ತದೆ. ಇಂದಿಗೂ ಇದೆ ಮತ್ತು ಮುಂದೆಯೂ ಇರುವುದು. ಈ ಅದ್ವಿತೀಯ ಸುರಕ್ಷತೆ ಲೋಕದ ಯಾವುದಾದರೂ ಧಾರ್ಮಿಕ ಗ್ರಂಥಕ್ಕೆ ದೊರೆತಿದೆಯೇ? ಸರ್ ವಿಲಿಯಮ್ ಮ್ಯೂರ್ ತನ್ನ ಗ್ರಂಥ Life of Mohammad" ನಲ್ಲಿ ಬರೆಯುತ್ತಾರೆ. ಅದರಲ್ಲಿ ಯಾವ ಸಂಶಯವು ಇಲ್ಲ. ಅದು ಮುಹಮ್ಮದ್(ಸ) ರವರು ನಮಗೆ ನೀಡಿದ ಗ್ರಂಥವೇ ಅದಾಗಿದೆ. ನಾವು ಪ್ರಬಲ ಸಾಕ್ಷ್ಯಾಧಾರ ನಿಮಿತ್ಯ ಹೇಳಬಹುದು, ಪವಿತ್ರ ಖುರ್‌ಆನ್‌ನಲ್ಲಿರುವ ಪ್ರತಿಯೊಂದು ವಚನವು ಅಸಲಿಯಾಗಿದೆ ಮತ್ತು ಮುಹಮ್ಮದ್(ಸ) ರವರ ಪರಿವರ್ತನಾತೀತ ಗ್ರಂಥವಾಗಿದೆ. ನಮ್ಮ ಬಳಿ ಎಲ್ಲಾ ತರಹದ ಸಾಕ್ಷ್ಯಗಳು ಇವೆ. ಅದರ ಆಂತರಿಕ ಸಾಕ್ಷ್ಯವಾಗಲಿ ಮತ್ತು ಬಹಿರಂಗ ಸಾಕ್ಷ್ಯವಾಗಿರಲಿ ಅದು ಮುಹಮ್ಮದ್(ಸ) ರವರು ಲೋಕದ ಮುಂದೆ ಪ್ರಸ್ತುತಪಡಿಸಿದ ಗ್ರಂಥವೇ ಆಗಿದೆ.

ನೋಲ್ಡಕ್ ಹೇಳುತ್ತಾನೆ. ಏನಾದರೂ ಸಾಧಾರಣ ರೀತಿಯ ತಪ್ಪು ಬರವಣಿಗೆಗಳು ಇದ್ದರೆ ಇರಬಹುದು. ಆದರೆ ಈ ಖುರ್‌ಆನ್ ಉಸ್ಮಾನ್(ರ) ಅವರು ಲೋಕದ ಮುಂದೆ ಪ್ರಸ್ತುತಪಡಿಸಿದ ಖುರ್‌ಆನ್ ಆಗಿದೆ. ಅದರ ಎಲ್ಲಾ ವಿಷಯಗಳು ಮುಹಮ್ಮದ್(ಸ) ರವರ ಮೇಲೆ ಅವತರಿಸಿದ ವಿಷಯಗಳೇ ಆಗಿವೆ. ಅದಾಗ್ಯೂ ಅದರ ಸಂಕಲನ ರೀತಿ ವಿಚಿತ್ರವಾಗಿದೆ. ಯುರೋಪಿಯನ್ ಮತಪಂಡಿತರು ಕಾಲಾಂತರದಿಂದ ಪವಿತ್ರ ಖುರ್‌ಆನ್‌ನಲ್ಲಿ ಬದಲಾವಣೆಗಳು ಆಗಿವೆ ಎಂದು ತೋರಿಸಲು ಬಹಳವಾಗಿ ಪ್ರಯತ್ನಪಟ್ಟರು. ಆದರೆ ಯಶಸ್ಸು ದೊರೆಯಲಿಲ್ಲ.

ಪವಿತ್ರ ಖುರ್‌ಆನ್ ಅಲ್ಲಾಹನಿಂದ ಅವತರಿಸಿದೆ ಎನ್ನಲು ಪ್ರಬಲ ಸಾಕ್ಷ್ಯವಿದೆ. ಪವಿತ್ರ ಖುರ್‌ಆನ್ ಅನಕ್ಷರಸ್ಥರಲ್ಲಿ ಬರುತ್ತದೆ ಮತ್ತು ಎಲ್ಲಾ ರೀತಿಯಿಂದ ಸುರಕ್ಷಿತವಾಗಿರುತ್ತದೆ. ಆದರೆ ತೌರಾತ್ ಮತ್ತು ಇಂಜೀಲ್ ವಿದ್ಯಾವಂತ ಸಮುದಾಯಗಳಲ್ಲಿ ಬಂದವು. ಆದರೆ ಸುರಕ್ಷಿತವಾಗಿಲ್ಲ, ಮೇಯರ್ ಈ ಬಗ್ಗೆ ತಮ್ಮ ಆಸೆಯನ್ನು ತೋಡಿಕೊಳ್ಳುತ್ತಾರೆ.

ಮುಸಲ್ಮಾನರ ಅಪ್ಪಟ ಅಪರಿವರ್ತಿತ ಮತ್ತು ಪರಿಶುದ್ಧ ಗ್ರಂಥ ಮತ್ತು ನಮ್ಮ ಗ್ರಂಥಗಳ ವಿಭಿನ್ನ ಸೂಕ್ತಗಳಲ್ಲಿರುವ ಭಿನ್ನತೆಗಳು ತಾಳೆ ಹಾಕಿ ನೋಡಿದರೆ ಅದು ಹೊಂದಾಣಿಕೆಯೇ ಇಲ್ಲದಂತಹ ಗ್ರಂಥಗಳಿಗೆ ಹೋಲಿಸಿದಂತಾಗುವುದು.

ಈಗ ಪ್ರಶ್ನೆ ಏಳುವುದೇನೆಂದರೆ ಪವಿತ್ರ ಖುರ್‌ಆನ್ ಇಂದಿಗೂ ಸುರಕ್ಷಿತವಾಗಿದ್ದು ಕೇವಲ ಕಾಕತಾಳಿಯವೇ? ಇಸ್ಲಾಮಿ ಇತಿಹಾಸ ಹೇಳುತ್ತದೆ. ಇದು ಕಾಕತಾಳೀಯವಲ್ಲ. ಬದಲು ಅದರ ಭೌತಿಕ ಹಾಗೂ ಆಂತರಿಕ ಸುರಕ್ಷತೆ (ಅಲ್-ಕಿತಾಬ್ ಮತ್ತು ಖುರ್‌ಆನ್ ಮುಬೀನ್) ಎರಡು ಮಾಧ್ಯಮಗಳಿಂದ ಆಗುತ್ತದೆ. ಅದರ ವಿವರ ಈ ಅಧ್ಯಾಯದ ಪ್ರಾರಂಭದಲ್ಲಿಯೇ ಮಾಡಲಾಗಿದೆ. ವಚನಗಳು ಅವತರಣೆ ಆದ ಪ್ರಾರಂಭದಿಂದಲೇ ಆ ವಚನಗಳು ಬರೆದಿಡಲಾಯಿತು. ಮತ್ತು ಅದರ ಸುರಕ್ಷತೆ ಆಗುತ್ತಾ ಹೋಯಿತು. ಅಲ್ಲಾಹನು ಅದಕ್ಕಾಗಿ ಎಂತಹ ಪ್ರೇಮಿಗಳನ್ನು ಒದಗಿಸಿದನೆಂದರೆ ಅದರ ಒಂದೊಂದು ಪದ ಸಹ ಕಂಠಸ್ಥ ಮಾಡುತ್ತಿದ್ದರು ಮತ್ತು ಹಗಲಿರುಳು ಪಠಿಸುತ್ತಿದ್ದರು ಮತ್ತು ಇತರರಿಗೂ ಆಲಿಸಿಕೊಡುತ್ತಿದ್ದರು. ಅದಲ್ಲದೇ ಅಲ್ಲಾಹನು ನಮಾಝುಗಳಲ್ಲಿ ಅದರ

ಯಾವುದಾದರೂ ಭಾಗ ಪಠಿಸಲು ಕಡ್ಡಾಯಗೊಳಿಸಿದನು. ಮತ್ತು ಈ ಶರತ್ತನ್ನು ವಿಧಿಸಲಾಯಿತು. ಆ ಗ್ರಂಥವಾಗಿ ನೋಡಿ ಅಲ್ಲ, ಬದಲು ಕಂಠಸ್ತ ಮಾಡಿಯೇ ಪಠಿಸಬೇಕು. ಯಾರೊಬ್ಬರು ಹೇಳುವುದಾದರೆ ಅದು ಮುಹಮ್ಮದ್ ರಸೂಲುಲ್ಲಾಹ್(ಸ) ಅವರಿಗೆ ಈ ವಿಚಾರ ಹೊಳೆಯಿತು ಎಂದಾದರೆ ಅದೇ ಮಾತು ಝುರ್‌ತಶ್ತ್, ಮೂಸಾ ಮತ್ತು ವೇದದವರಿಗೆ ಏಕೆ ಹೊಳೆಯಲಿಲ್ಲ. ಅಂದರೆ ಅದರ ಬಲ್ಲವನು ಬೇರೆಯೇ ಶಕ್ತಿಯಿದೆ ಎಂದು ತಿಳಿಯಬಹುದು. ಕೊಲಂಬಸ್ ಅಮೇರಿಕಾ ಕಂಡು ಹಿಡಿದ. ಭಾರತಕ್ಕೆ ಮರಳಿ ಬಂದಾಗ ಹಲವರು ಹೇಳಿದರು. ಇದೇನು ಮಹಾ, ನಾನು ಹೋಗುತ್ತಿದ್ದರೆ ನಾವು ಸಹ ಕಂಡುಹಿಡಿಯಬಹುದಾಗಿತ್ತು. ಅದಕ್ಕೆ ಕೊಲಂಬಸ್ ಒಂದು ವಿಚಿತ್ರ ರೀತಿಯಲ್ಲಿ ಉತ್ತರ ಕೊಟ್ಟನು. ಆ ಒಬ್ಬರ ಕೈಯಲ್ಲಿ ಒಂದು ಮೊಟ್ಟೆಯನ್ನು ಕೊಟ್ಟು ಹೇಳಿದನು. ಈ ಮೊಟ್ಟೆ ಮೇಜಿನ ಮೇಲೆ ನಿಲ್ಲಿಸಿಡಿರಿ. ಎಲ್ಲರೂ ಪ್ರಯತ್ನ ಮಾಡಿದರು. ಆದರೆ ಆಗಲಿಲ್ಲ. ಅಂತಿಮವಾಗಿ ಕೊಲಂಬಸ್ ಎದ್ದನು. ಒಂದು ಸೂಜಿಯಿಂದ ಅದಕ್ಕೆ ತೂತು ಹಾಕಿದನು. ಅದರಿಂದ ಬಂದ ಜಿಗುಟುರಸದ ಸಹಾಯದಿಂದ ಅದನ್ನು ಮೇಜಿನ ನಿಲ್ಲಿಸಿ ತೋರಿಸಿದನು. ಆಗ ಜನರು ಹೇಳಿದರು, ಹೀಗೆ ನಾವು ಸಹ ಮಾಡಬಹುದಾಗಿತ್ತು. ಕೋಲಂಬಸ್ ಹೇಳಿದನು. ಅಮೇರಿಕಾ ಕಂಡು ಹಿಡಿದಾಗ ನೀವು ಹೇಳಿದಿರಿ ನಿಮಗೆ ಅವಕಾಶ ದೊರೆಯಲಿಲ್ಲ, ಆದರೆ ಇದೀಗ ಈ ವಿಷಯದಲ್ಲಿ ನಿಮಗೆ ಅವಕಾಶ ದೊರೆತಿತ್ತು. ಏಕೆ ತಮ್ಮ ಬುದ್ಧಿಶಕ್ತಿಯನ್ನು ಉಪಯೋಗಿಸಲಿಲ್ಲ. ಅಂತೆಯೇ ನಾವು ಹೇಳುತ್ತೇವೆ. ಪವಿತ್ರ ಖುರ್‌ಆನ್ ಸುರಕ್ಷತೆಗಾಗಿ ನಾವು ಅನುಸರಿಸಿದ ಮಾರ್ಗಗಳು, ಪವಿತ್ರ ಖುರ್‌ಆನ್ ಪ್ರಸ್ತುತಪಡಿಸಿದವರಿಗೆ ಲಭಿಸಿದರೆ ಇತರ ಮತಸ್ಥರಿಗೆ ಏಕೆ ಸಾಧ್ಯವಾಗಲಿಲ್ಲ?

ಇದು ಸಹ ನೆನಪಿರಲಿ. ಪವಿತ್ರ ಖುರ್‌ಆನ್ ಕಂಠಸ್ತ ಮಾಡುವಂತಹ ಜನರ ಲಭ್ಯತೆ ಮತ್ತು ನಮಾಝುಗಳಲ್ಲಿ ಪಠಿಸುವುದು ಹಝ್ರತ್ ರಸೂಲುಲ್ಲಾಹ್(ಸ) ರವರ ಶಕ್ತಿಯ ಮಾತಾಗಿರಲಿಲ್ಲ. ಅದನ್ನು ಒದಗಿಸುವುದು ಅಲ್ಲಾಹನ ಕಾರ್ಯವಾಗಿತ್ತು. ಆ ಕಾರಣ ಅಲ್ಲಾಹನು ಹೇಳಿದನು; "ಇನ್ನ ನಹನು" ಅದನ್ನು ಕಂಠಸ್ತ ಮಾಡುವಂತಹ ಜನರನ್ನು ನಾವು ಸೃಷ್ಟಿಸುವೆವು. ಇಂದಿಗೆ ಆ ಘೋಷಣೆ ಮಾಡಿ ಹದಿಮೂರು ನೂರು ವರ್ಷಗಳು ಕಳೆದಿವೆ, ಪವಿತ್ರ ಖುರ್‌ಆನ್‌ನ್ನು ಕೋಟ್ಯಾಂತರ ಜನರು ಕಂಠಸ್ತ ಮಾಡಿದ್ದಾರೆ. ಕೆಲ ಯುರೋಪಿಯನ್ ತನ್ನ ಅಜ್ಞಾನತೆಯಿಂದಾಗಿ ಹೇಳುತ್ತಿರುತ್ತಾರೆ. ಅಂತಹ ದೊಡ್ಡದಾದ ಖುರ್‌ಆನ್ ಹೇಗೆ ಕಂಠಸ್ತ ಮಾಡಲು ಸಾದ್ಯ. ಆದರೆ ಖಾದಿಯಾನಿನಲ್ಲಿಯೇ ಹಲವು ಕಂಠಸ್ತರನ್ನು ಕಾಣಬಹುದು. ಅವರಿಗೆ ಸರಿಯಾದ ರೀತಿಯಲ್ಲಿ ಖುರ್‌ಆನ್ ಕಂಠಸ್ತವಾಗಿದೆ. ಅಂದ ಹಾಗೆ ನನ್ನ ಹಿರಿಯ ಪುತ್ರ ನಾಸಿರ್ ಅಹ್ಮದ್ ಸಹ ಹನ್ನೊಂದು ವರ್ಷ ಪ್ರಾಯದಲ್ಲಿ ಖುರ್‌ಆನ್ ಕಂಠಸ್ತ ಮಾಡಿದ್ದನು. ವಾಸ್ತವವೇನೆಂದರೆ ಅಲ್ಲಾಹನು ಪವಿತ್ರ ಖುರ್‌ಆನ್‌ನ್ನು ತನ್ನ ವಿಶೇಷ ಅನುಗ್ರಹದಿಂದ ಎಂತಹ ಸುಲಲಿತವಾಗಿ ಪದಗಳನ್ನು ಜೋಡಿಸಿದ್ದಾನೆಂದರೆ ಅದು ಸರಳವಾಗಿ ಕಂಠಸ್ತವಾಗುತ್ತದೆ. ಖುರ್‌ಆನ್ ಕವನ ಸಾಲುಗಳಲ್ಲ. ಆದರೆ ಕವನ ಸಾಲುಗಳಿಂದಲೂ ಬೇಗ ಕಂಠಸ್ತವಾಗುತ್ತವೆ. ಉರ್ದು ಅಥವಾ ಇಂಗ್ಲೀಷ್ ಬರಹಗಳಿಗಿಂತ ಪವಿತ್ರ ಖುರ್‌ಆನಿಗೆ ಅದರ ಅರ್ಧ ಸಮಯ ಸಹ ಖರ್ಚು ಮಾಡಬೇಕಾಗಿಲ್ಲ. ಅದು ಕಂಠಸ್ತವಾಗಿಬಿಡುತ್ತದೆ.

**(ತಫ್ಸೀರ್ ಕಬೀರ್ ಸಂಪುಟ-4, ಪುಟ-15-18 ಮುದ್ರಣ ಖಾದಿಯಾನ್ 2010)**

*(ಪುಟ ಸಂಖ್ಯೆ 2ರ ಉಳಿದ ಭಾಗ)*

ಮೌಊದ್‌ರವರಿಗೆ ನಾಲ್ಕು ದೃಷ್ಟಾಂತಗಳು ವಿಶಿಷ್ಠ ರೂಪದ್ದಾಗಿವೆ. ಅದರಲ್ಲಿ ಬೇರೆಯವರು ಯಾರೂ ಭಾಗಿಯಲ್ಲ.

1) ಮೊದಲನೆಯದ್ದೆಂದರೆ ಉಲಮಾಅ ಅವರಿಗೆ ಧಿಕ್ಕರಿಸುವರು ಅವರ ಹೆಸರು ಕಾಫಿರ್, ದಜ್ಜಾಲ್ ಮತ್ತು ಬೇಈಮಾನ್ (ಅವಿಶ್ವಾಸಿ) ಎಂದಿರುವರು. ಎಲ್ಲರೂ ಸೇರಿ ಅವರನ್ನು ಧಿಕ್ಕರಿಸುವರು. ಅವರ ಧಿಕ್ಕಾರಕ್ಕಾಗಿ ಪೀಡಿಸಲಿಕ್ಕಾಗಿ ಟೊಂಕಕಟ್ಟಿ ನಿಲ್ಲುವರು. ಅವರ ಪೈಕಿ ಕಠಿಣ ರೀತಿಯ ತಡೆ ಒಡ್ಡುವರು. ಅವರನ್ನು ಮುಲ್‌ಹಿದ್ ಮತ್ತು ಮುರ್‌ತದ್ ಎಂದು ಭಾವಿಸುವರು ಮತ್ತು ಅವರನ್ನು ಇಸ್ಲಾಮಿನ ಬುಡ ಕತ್ತರಿಸುವವ ಎನ್ನುವರು. ಇವನು ಹೇಗೆ ಮಹದಿ ಆಗಲು ಸಾಧ್ಯ. ಅವರನ್ನು ಕಾಫಿರ್ ಮತ್ತು ಶಾಪಗ್ರಸ್ತ ಎನ್ನುವುದು ಪುಣ್ಯವೆಂದು ಭಾವಿಸುವರು. ಮತ್ತು ಅವರನ್ನು ಆ ಕಾಲದ ಮೌಲ್ವಿಗಳು ಒಪ್ಪಲು ಸಾಧ್ಯವೇ ಇಲ್ಲ. ಆದರೆ ಅಂತಿಮವಾಗಿ ಅದರ ನಿಜಸ್ಥಿತಿ ಬಹಿರಂಗ ಗೊಂಡಾಗ ಕಪಟತನದಿಂದ ಸ್ವೀಕರಿಸುವರು. ಹೃದಯದಿಂದಲ್ಲ, ಮಹದಿಯನ್ನು ಸ್ವೀಕರಿಸುವವರಲ್ಲಿ ಹೆಚ್ಚಿನ ಜನರು ಸಾಮಾನ್ಯ ಜನರಾಗಿರುವರು ಅಥವಾ ಪರಿಶುದ್ಧ ಮನಸುಳ್ಳವರು ಸಜ್ಜನರು ಜಪತಪ ಮಾಡುವರು, ತಮ್ಮ ದಿವ್ಯ ಸ್ವಪ್ನಗಳ ಮೂಲಕ ಅವರನ್ನು ಗುರುತಿಸಿಕೊಳ್ಳುವರು. ಆದರೆ ಮೌಲ್ವಿಗಳಿಗೆ ಅಧರ್ಮಿ, ಧಿಕ್ಕಾರಿ, ದಜ್ಜಾಲ್ ಎನ್ನುವ ಹೊರತು ಯಾವ ಪಾಲು ದೊರೆಯುವುದಿಲ್ಲ. ಆ ಸಮಯದ ಮೌಲ್ವಿಗಳು ಭೂಮಿಯಲ್ಲಿ ನೆಲೆಸುವ ನಿಕೃಷ್ಟ ಸೃಷ್ಟಿಯಾಗಿರುವರು. ಅವರ ಸಜ್ಜನಿಕೆ ದೂರದೃಷ್ಟಿ ಕಳೆದುಹೋಗುವುದು, ಅವರು ಆಧ್ಯಾತ್ಮಿಕ ಮಾತುಗಳನ್ನು ಕೇಳಿ ತಕ್ಷಣದಿಂದ ನಿರಾಕರಿಸುವರು. ಈ ಮಾತುಗಳು ನಮ್ಮ ವಿಶ್ವಾಸಿಗಳಿಗೆ ವಿರುದ್ಧವಾಗಿವೆ ಎನ್ನುವರು.

2) ಮಹದಿ ಮೌಊದ್‌ರವರಿಗಿರುವ ಎರಡನೆಯ ದೃಷ್ಟಾಂತವೆಂದರೆ. ಆ ಸಮಯದಲ್ಲಿ ರಂಝಾನ್ ಮಾಹೆಯಲ್ಲಿ ಸೂರ್ಯ, ಚಂದ್ರ ಗ್ರಹಣ ಉಂಟಾಗುವುದು. ಮೊದಲೇ ತಿಳಿಸಿದಂತೆ ಹದೀಸಿನ ತಾತ್ಪರ್ಯ ಸ್ಪಷ್ಟವಾಗಿದೆ. ಇಲ್ಲಿಯುವರೆಗಿನ ಯಾವುದೇ ಪ್ರವಾದಿ ಅಥವಾ ಮುಹದ್ದೀಸ್‌ಗೋಸ್ಕರ ರಂಝಾನ್ ಮಾಹೆಯಲ್ಲಿ ಚಂದ್ರ, ಸೂರ್ಯ ಗ್ರಹಣ ಒಟ್ಟುಗೂಡಲಿಲ್ಲ. ಈ ಪ್ರಪಂಚ ಸೃಷ್ಟಿಯಾದಾಗಿನಿಂದ ಯಾವುದೇ ಪ್ರವಾದಿತ್ವ ಅಥವಾ ಮುಹದ್ದೀಸರ ಕಾಲದಲ್ಲಿ ಎಂದೂ ಚಂದ್ರ, ಸೂರ್ಯಗ್ರಹಣ ಒಟ್ಟುಗೂಡಲಿಲ್ಲ. ಯಾರಾದರೂ ಅದನ್ನು ಸಾಬೀತುಪಡಿಸುವವರಿದ್ದರೆ ಅದರ ಭಾರ ಅವರ ಮೇಲಿದೆ. ಆದರೆ ಹದೀಸಿನ ತಾತ್ಪರ್ಯ ಮಹದಿಯ ಆಗಮನಕ್ಕಿಂತ ಮುಂಚೆ ಚಂದ್ರ, ಸೂರ್ಯ ಗ್ರಹಣ ಉಂಟಾಗುವುದು ಎಂದಲ್ಲ. ಏಕೆಂದರೆ ಈ ಸಂದರ್ಭದಲ್ಲಿ ಸಾಧ್ಯತೆಗಳಿರುವುದೇನೆಂದರೆ ಚಂದ್ರ, ಸೂರ್ಯ ಗ್ರಹಣ ರಂಝಾನಿನಲ್ಲಿ ಆದದ್ದು. ನೋಡಿ ಯಾವನೇ ಮಿಥ್ಯವಾದಿ ಮಹದಿಯಾಗುವ ದಾವೆ ಮಾಡಬಹುದಾಗಿದೆ. ಹಾಗಾದರೆ ಅದು ಸಂಶಯಕ್ಕೆ ಎಡೆ ಮಾಡಿಕೊಡುವುದು ಸಹಜವಾಗಿರುತ್ತದೆ. ಏಕೆಂದರೆ ನಂತರ ದಾವೆ ಸಾರುವುದು ಸುಲಭ ಸಾಧ್ಯವಿದೆ. ನಂತರ ಹಲವು ದಾವೆದಾರರು ಪ್ರಕಟವಾದರೆ ಸ್ಪಷ್ಟ ಯಾರು ಸತ್ಯವಂತರೆನಿಸಿಕೊಳ್ಳುವುದಿಲ್ಲ. ಬದಲಾಗಿ ಹದೀಸಿನ ತಾತ್ಪರ್ಯವೇನೆಂದರೆ ಮಹದಿ ಮೌಊದ್ ದಾವೆ ಸಾರಿದ ನಂತರ ಅಲ್ಲದೆ ಒಂದಿಷ್ಟು ಅವಧಿ ಕಳೆದ ನಂತರ ಅವರ ಪರವಾಗಿ ಈ ದೃಷ್ಟಾಂತ ಜಾಹಿರಾಗಬೇಕು. ಹದೀಸಿನಲ್ಲಿದ್ದಂತೆ. **ಇನ್ನ ಲಿಮಹದಿಯೀನ ಆಯತೈನಿ.** ಸ್ಪಷ್ಟ ರೂಪದಲ್ಲಿ ಸಾಕ್ಷ್ಯವಾಗಿದೆ. ಈ ರೀತಿಯಾಗಿ ಯಾವ ಮಿತ್ಯವಾದಿಯ ನಡೆ ಸಫಲವಾಗುವುದಿಲ್ಲ. ಯಾವ ಯೋಜನೆಯು ನಡೆಯುವುದಿಲ್ಲ. ಏಕೆಂದರೆ ಮಹದಿ ಮೌಊದ್ ದಾವೆಯ ಕೆಲ ಅವಧಿ ನಂತರ ಅವನ ದಾವೆಯು ಪುಷ್ಟಿ ನೀಡುವ ಸಲುವಾಗಿ ಚಂದ್ರ ಸೂರ್ಯ ಗ್ರಹಣ ಆಗಬೇಕಾಗಿದೆಯೇ ಹೊರತು ಅದನ್ನು ನೋಡಿ ದಾವೆ ಸಾರುವುದು ಅಲ್ಲ. ಈ ತರಹದ ಬೆಂಬಲಿತ ದೃಷ್ಟಾಂತಗಳು ನಮ್ಮ ಸಯ್ಯದಿ ನಬಿ[ಸ] ರವರಿಗಾಗಿಯೂ ಹಿಂದಿನ ಗ್ರಂಥಗಳಲ್ಲಿ ಬರೆಯಲ್ಪಟ್ಟಿದ್ದವು. ಅವು ಹಝ್ರತ್ ರಸೂಲುಲ್ಲಾಹ್[ಸ] ರವರ ಪ್ರವಾದಿತ್ವದ ನಂತರ ಪ್ರಕಟವಾದವು ಮತ್ತು ಅವರು ಮಾಡಿದ ದಾವೆಗೆ ಪೂರಕವಾದವು. ಅಂತಹ ದಾವೆಗಿಂತ ಮುಂಚಿನ ದೃಷ್ಟಾಂತಗಳು ಒಗಟಿನ ರೂಪದಲ್ಲಿ ಮತ್ತು ಅನರ್ಥವಾಗಿರುತ್ತವೆ. ಏಕೆಂದರೆ ಅದರಲ್ಲಿ ಸುಳ್ಳಿಗೆ ಬಹಳಷ್ಟು ಅವಕಾಶಗಳಿರುತ್ತವೆ. ಅದರಲ್ಲಿಯೂ ವಿಶೇಷವೇನೆಂದರೆ ಚಂದ್ರ ಸೂರ್ಯ ಗ್ರಹಣಗಳು ರಂಝಾನಿನಲ್ಲಿಯೇ ಆಗುವುದು ಪವಾಡವಾಗಿದೆ, ಕೇವಲ ಒಟ್ಟುಗೂಡಿಕೆ ಪವಾಡವಲ್ಲ.

3) ಮಹದಿ ಮೌಊದರ ತೃತೀಯ ದೃಷ್ಟಾಂತವೆಂದರೆ ಒಂದು ಗೊಂದಲ ಏರ್ಪಡುವುದು. ಕ್ರೈಸ್ತರ ಮತ್ತು ಮಹದಿ ಸಂಗಡಿಗರ ನಡುವೆ ಒಂದು ಯುದ್ಧ ಏರ್ಪಡುವುದು. ಕ್ರೈಸ್ತರ ಪರ ಶೈತಾನನು ಧ್ವನಿ ಮೊಳಗಿಸುವನು. **ಅಲ್‌ಹಖ್ಖು ಫೀ ಆಲಿ ಈಸಾ** ಅಂದರೆ ಈಸಾ ಅನುಯಾಯಿಗಳು ವಿಜಯಿಯಾದರು. ಮಹದಿ ಪರವಾಗಿ ದೈವಿಕ ಧ್ವನಿ ಮೊಳಗುವುದು. ಅಂದರೆ ಅವರ ಪರವಾಗಿ ಸಾಕ್ಷ್ಯಗಳು ಜಾಹೀರಾಗುವುವು. **ಅಲ್ ಹಖ್ಖು ಫೀ ಆಲಿ ಮುಹಮ್ಮದ್** ಅಂದರೆ ಸತ್ಯ ಮಹದಿಯ ಪರವಾಗಿದೆ. ಅಂತಿಮವಾಗಿ ಈ ಧ್ವನಿಯು ನಂತರ ಶೈತಾನಿನ ಅಂಧಕಾರ ರೂಪವಾಗುವುದು ಮತ್ತು ಜನರು ಇಮಾಮರನ್ನು ಗುರುತಿಸಿಕೊಳ್ಳುವರು.

4) ಮಹದಿ ಮೌಊದ್‌ಗಿರುವ ನಾಲ್ಕನೆಯ ದೃಷ್ಟಾಂತವೆಂದರೆ ಆ ಸಮಯ ಹಲವು ಮುಸಲ್ಮಾನರು ಯಹೂದ್ಯರ ಹಾಗೆ ದಜ್ಜಾಲರೊಂದಿಗೆ ಶಾಮೀಲಾಗುವರು. ಅಂದರೆ ಅವರು ನಾಮಮಾತ್ರಕ್ಕೆ ಮುಸ್ಲಿಮರೆನಿಸಿಕೊಳ್ಳುವರು. ಆದರೆ ದಜ್ಜಾಲಿಗೆ ಸಹಕಾರ ನೀಡುವರು. ಅಂದರೆ ಕ್ರೈಸ್ತರ ಪರವಾಗಿ ನಿಲ್ಲುವರು. ಈ ನಾಲ್ಕು ದೃಷ್ಟಾಂತಗಳು ಮಹದಿಯರಿಗಾಗಿ ವಿಶಿಷ್ಠವಾಗಿವೆ. ಅದಾಗ್ಯೂ ಈ ಕಾಲಘಟ್ಟದ ಮೊದಲು ಸಹ ಹಲವು ಸಜ್ಜನರು, ಪೂರ್ವ ಮಹಾತ್ಮರುಗಳಿಗೆ ಕಾಫಿರ್ ಎಂದಿದ್ದಾರೆ. ಆದರೆ ಅದನ್ನು ದೃಷ್ಟಾಂತ ಎನ್ನಲು ಕಾರಣವೆಂದರೆ ಈ ಮಟ್ಟದಲ್ಲಿ ಸಿದ್ಧರಾಗಿ ಪಣತೊಟ್ಟ ಮೌಲ್ವಿಗಳು ಅವರ ಧಿಕ್ಕಾರಕ್ಕಾಗಿ ನಿಂತ ಉದಾಹರಣೆ ಮೊದಲು ಎಂದೂ ಕಾಣಲಿಲ್ಲ. ಅಂದ ಹಾಗೆ ಹೀಗೆಯೇ ಆಯಿತು. ಈ ವಿನೀತನಿಗೆ ಕೇವಲ ಕಾಫಿರ್ ಅಲ್ಲ, ಅಕ್ಫರ್ ಎನ್ನಲಾಯಿತು. (ಅಂದರೆ ಕಾಫಿರ್‌ಗಿಂತಲೂ ಕಡೆ) ಹಾಗೆಯೇ ಮುಂಚೆ ಸಹ ಯಾವುದೇ ತಿಂಗಳಿನಲ್ಲಿ

ಚಂದ್ರ ಸೂರ್ಯ ಗ್ರಹಣಗಳು ಒಟ್ಟಾದರೆ ಒಟ್ಟಾಗಿರಬಹುದು. ಆದರೆ ಹೀಗೆ ಎಂದೂ ಘಟಿಸಲಿಲ್ಲ. ನಮ್ಮ ಈ ಕಾಲಘಟ್ಟದ ಲೋಕ ಪ್ರಾರಂಭದಿಂದ ಇಂದಿನವರೆಗೆ ಎಂದೂ ಚಂದ್ರ ಸೂರ್ಯ ಗ್ರಹಣಗಳು ರಂಝಾನ್ ತಿಂಗಳಿನಲ್ಲಿ ಈ ರೀತಿಯಾಗಿ ಒಟ್ಟುಗೂಡಲಿಲ್ಲ. ಆ ಕಾಲಘಟ್ಟದ ಒಬ್ಬ ಪ್ರವಾದಿತ್ವದ ಅಥವಾ ಮುಹದ್ದಿತಿನ ದಾವೆದಾರನು ಸಹ ಉಪಸ್ಥಿತನಾಗಿರಬೇಕು. ಹಾಗೆಯೇ ಈ ಮುಂಚೆಯೂ ಸಹ ಕ್ರೈಸ್ತರೊಡನೆ ಚರ್ಚೆ ಏರ್ಪಟ್ಟಿರಬಹುದು. ಆದರೆ ಈಗ ತೋರಿದಂತಹ ಪಿತೂರಿಗಳು, ದೇಶದಾದ್ಯಂತ ಶೈತಾನನ ಧ್ವನಿಗಳು ಮೊಳಗಿದವು. ಕತ್ತೆ ಸವಾರಿ ನಡೆಸಿದರು. ಬಹುರೂಪಗಳ ಮುಖವಾಡ ಧರಿಸಿದರು. ಈ ರೀತಿಯ ಅಪಹಾಸ್ಯ ಎಂದೂ ಸಹ ಕಂಡಿರಲಿಲ್ಲ. ಮತ್ತು ಈ ಅಪಹಾಸ್ಯದ ಸೇಡು ಅಲ್ಲಾಹನಿಂದ ಪ್ರಕಟವಾಗಿದ್ದು, ಅದು ದೈವಿಕ ಧ್ವನಿಯಾಗಿದೆ ಎಂದು. ಈ ಇಂತಹದೊಂದು ಸ್ಪಷ್ಟರೂಪದಲ್ಲಿ ಬಹಿರಂಗಗೊಂಡಿಲ್ಲ. ಆಲಿಸುವವರು ನೆನಪಿಡಲಿ. ಅದಾಗ್ಯೂ ಈ ಹಿಂದೆಯೂ ಸಹ ಕೆಲ ಮುಸ್ಲಿಮರು ಸ್ವಹಿತ ಬಯಸುವವರು, ಪಾದರಿಯರ ಜೊತೆ ಹೌದಪ್ಪ ಎನ್ನುತ್ತಿದ್ದರು. ಆದರೆ ಈಗ ಮೌಲ್ವಿಗಳು ಮತ್ತು ಅವರ ಮೂಢ ಚೇಲಾಗಳು ಈ ಪಾದರಿ ದಜ್ಜಾಲ್‌ಳೊಂದಿಗೆ ಸೇರಿ ಅವರ ಮಾತುಗಳಿಗೆ ತಲೆದೂರಿ ಅವರನ್ನು ವಿಜಯಿ ಎಂದಿದ್ದಾರೆ. ಅವರ ಸಂತೋಷಗಳಲ್ಲಿ ಸೇರಿ ಸಂತುಷ್ಟರಾಗಿದ್ದಾರೆ, ಪಿತೂರಿಗಳನ್ನು ನಡೆಸಿ ನೂರಾರು ಪತ್ರಿಕೆಗಳನ್ನು ಬರೆದಿದ್ದಾರೆ ಮತ್ತು ಸತ್ಯವಂತರ ಮೇಲೆ ಶಾಪ ಹಾಕಿದ್ದಾರೆ. ಕ್ರೈಸ್ತರಿಗೆ ಸಂತೋಷಪಡಿಸಿದ್ದಾರೆ ಮತ್ತು ಕ್ರೈಸ್ತರನ್ನು ವಿಜಯಿ ಎಂದು ಸಾರಿದ್ದಾರೆ. ಅದರ ಉದಾಹರಣೆ ಹದಿಮೂರು ನೂರು ವರ್ಷಗಳಲ್ಲಿಯೇ ಕಾಣಲಾಗದು. ಅಂದ ಹಾಗೆ ಇದು ಭವಿಷ್ಯವಾಣಿಯ ಪ್ರಕಟಣೆಯಾಗಿದೆ. ಮೊದಲೇ ಹದೀಸುಗಳಲ್ಲಿ ಬಂದಿದೆ, ಎಪ್ಪತ್ತು ಸಾವಿರ ಮುಸಲ್ಮಾನರೆನ್ನಿಸಿಕೊಳ್ಳುವವರು ದಜ್ಜಾಲರೊಂದಿಗೆ ಸೇರುವರು. ಈಗ ಕಾಫಿರ್ ಎನ್ನುವ ಮೌಲ್ವಿಗಳು ತೋರಿಸಲಿ. ಆ ಮಾತುಗಳು ಪೂರ್ಣಗೊಂಡಿದೆಯೇ ಅಥವಾ ಇಲ್ಲ. ಅಲ್ಲದೆ ಈ ಎರಡು ದೃಷ್ಟಾಂತಗಳು ಅಂದರೆ ಮಹದಿಯರನ್ನು ಬಹು ಜೋರಾಗಿ ಕಾಫಿರ್ ಮತ್ತು ದಜ್ಜಾಲ ಎನ್ನುವುದು ಹಾಗೂ ಕ್ರೈಸ್ತರ ಪರವಾಗಿರುವುದು ಮತ್ತು ಅವರಿಗೆ ವಿಜಯಿ ಎನ್ನುವುದು, ತನ್ನ ಕೈಗಳಿಂದ ಮೌಲ್ವಿಗಳು ಹೇಗೆ ಆಚರಿಸಿದರೆಂದರೆ ಅದರ ಉದಾಹರಣೆ ಮೊದಲ ಕಾಲಗಳಲ್ಲಿ ದೊರಕಲಾರದು. ಮೊದಲೇ ಪರಸ್ಪರ ಯೋಚಿಸಿ ತೀರ್ಮಾನಿಸಿಕೊಳ್ಳಲಿಲ್ಲ. ಹೀಗೆ ನಾವು ಸ್ವಯಂ ಈ ಎರಡು ದೃಷ್ಟಾಂತಗಳಿಗೆ ಸಾಕ್ಷಿಯಾಗುವೆವು ಎಂದು. ಯಾವ ಒತ್ತಡ, ಶಕ್ತಿಮೀರಿ ಕಾಫಿರ್ ಎಂದು ವಾದಿಸಿದ್ದಾರೆಂದರೆ, ಮೊದಲು ಯಾವಾಗ ಮಹದಿ ಎಂದು ವಾದಿಸಿದವರಿಗೆ ಇಂತಹ ಕಾಫಿರ್, ದಜ್ಜಾಲ್, ಧರ್ಮಬಾಹಿರ, ಅವಿಶ್ವಾಸಿ ಎನ್ನುವ ಹಾಗೂ ಎಲ್ಲಾ ದೇಶಗಳ ಉಲಮಾಗಳು ಒಮ್ಮತ ಹೊಂದಿರುವುದು. ಎಲ್ಲಾ ದೇಶಗಳಲ್ಲಿ ಅದು ಪ್ರಚುರಪಡಿಸಿದ್ದು, ಮೊದಲು ಎಂದೂ ಕಂಡುಬಂದಿಲ್ಲ. ಇದ್ದರೆ ಅದರ ಉದಾಹರಣೆ ವ್ಯಕ್ತಪಡಿಸಿರಿ. ಇಲ್ಲದಿದ್ದರೆ ಮಹದಿ ಮೌಊದ್‌ರ ಒಂದು ವಿಶೇಷ ದೃಷ್ಟಾಂತ ಸ್ವಯಂ ಅವರು ತಮ್ಮ ಕೈಗಳಿಂದ ದೃಢಿಕರಿಸಿದಂತಾಗುವುದು. ಮೊದಲು ಸಹ ಈ ರೀತಿ ಕ್ರೈಸ್ತರ ಜೊತೆಗೂಡಿದ್ದರೆ, ಅವರನ್ನು ವಿಜಯಿ ಎಂದಿದ್ದರೆ ಅದರ ಉದಾಹರಣೆಯು ತನ್ನಿರಿ. ಮೊದಲು ಯಾವನೇ ವ್ಯಕ್ತಿಯು ಸಮಯದಲ್ಲಿ ಅವನು ಮಹದಿಯಾಗುವ ದಾವೆ ಮಾಡಿರಬೇಕು. ಚಂದ್ರ, ಸೂರ್ಯ, ಗ್ರಹಣ ರಂಜಾನ್ ಮಾಹೆಯಲ್ಲಿ ಒಟ್ಟುಗೂಡಿರಬೇಕು. ಅದರ ಉದಾಹರಣೆ ತೋರಿಸಿ. ಮೊದಲು ಸಹ ಯಾವುದೇ ಮಹದಿ ಮತ್ತು ಕ್ರೈಸ್ತರ ನಡುವೆ ಚರ್ಚೆ ನಡೆದಿರಬೇಕು. ಕ್ರೈಸ್ತರು ತಮ್ಮ ವಿಜಯ ಎಂದು ಶೈತಾನ ರೀತಿಯಲ್ಲಿ ಧ್ವನಿಯೇರಿಸಿರಬೇಕು. ಅದರ ಉದಾಹರಣೆ ತೋರಿಸಿ. ನಾವು ಈ ನಾಲ್ಕೂ ಉದಾಹರಣೆಗಳನ್ನು ಪ್ರಸ್ತುತಪಡಿಸುವವರಿಗೆ ನಗದು ಸಾವಿರ ರೂಪಾಯಿ ನಗದಿಪಡಿಸುತ್ತೇವೆ. ನಾವು ಈ ರೂಪಾಯಿಗಳನ್ನು ನೀಡಲು ಯಾವ ಶರತ್ತು ವಿಧಿಸುವುದಿಲ್ಲ. ಕೇವಲ ಇಷ್ಟು ಮಾಡಿದರೆ ಸಾಕು. ನಿಮ್ಮ ಅರ್ಜಿ ಬಂದ ನಂತರ ಸಾವಿರ ರೂಪಾಯಿಗಳನ್ನು ಮೌಲ್ವಿ ಮುಹಮ್ಮದ್ ಹಸನ್ ಸಾಹಿಬ್ ಲೂಧಿಯಾನಿ ಅವರ ಬಳಿ ಮೂರು ವಾರದೊಳಗೆ ಜಮೆ ಮಾಡಲಾಗುವುದು ಮತ್ತು ಮೌಲ್ವಿ ಸಾಹಿಬರು ಒಂದು ತಾರೀಖಿಗೆ ಅವರ ಕಡೆಯಿಂದ ನಿಗದಿಪಡಿಸಿದ್ದು ಉಭಯತ್ರರಿಗೆ ತಮ್ಮ ಮನೆಗೆ ಕರೆಯುವರು, ಉಚ್ಚ ಸ್ವರದಲ್ಲಿ ಮೂರು ಸಲ ಆಣೆ ವಹಿಸುವರು ಮತ್ತು ಹೇಳುವರು. ನಾನು ಅಲ್ಲಾಹನ ಮೇಲೆ ಆಣೆವಹಿಸಿ ಹೇಳುತ್ತೇನೆ. ಇಲ್ಲಿ ಪ್ರಸ್ತುತಪಡಿಸಿದ ಘಟನೆಗಳು ಅದ್ವಿತೀಯವಲ್ಲ. ಅದರಲ್ಲಿ ಹೇಳಲಾದ ಉದಾಹರಣೆಗಳು ನಿಜವಾಗಿಯೂ ಸರಿ ಮತ್ತು ದಿಟವಾಗಿವೆ. ಈ ದೃಷ್ಟಾಂತಗಳಿಗೆ ಸಾಕ್ಷ್ಯವಹಿಸಿದ ದಾವೆದಾರನು ನಿಜವಾಗಿಯೂ ಕಾಫಿರ್ ಆಗಿದ್ದಾನೆ ಮತ್ತು ನಾನು ಪೂರ್ಣಪ್ರಜ್ಞೆಯಿಂದ ಹೇಳುತ್ತೇನೆ. ನಿಶ್ಚಿತವಾಗಿಯೂ ಅವನು ಕಾಫಿರ್ ಆಗಿದ್ದಾನೆ. ನಾನು ಸುಳ್ಳು ಹೇಳುವವನಾದರೆ ನನ್ನ ಮೇಲೆ ಸುಳ್ಳುಗಾರರ ಮೇಲೆ ಆಗುವಂತಹ ಶಾಪ, ದ್ವಿವಿಕ ಶಿಕ್ಷೆ ಅವತರಿಸಲಿ. ನಾವು ಪ್ರತಿ ಸಲ ಆಮೀನ್ ಎನ್ನುತ್ತೇವೆ. ರೂಪಾಯಿಗಳನ್ನು ಹಿಂದಿರುಗಿಸಲು ಯಾವ ಶರತ್ತಿಲ್ಲ, ಶಿಕ್ಷೆ ನಿಗದಿಪಡಿಸಲು ಯಾವ ಅವಧಿ ನಿಗದಿಯೂ ಇಲ್ಲ. ನಮಗೆ ಇಷ್ಟೇ ಸಾಕು. ಒಂದು ಮೌಲ್ವಿ ಸಾಹಿಬ್ ಅಲ್ಲಾಹನಿಂದ ಭಯಪಡಬೇಕು ಮತ್ತು ಆಣೆ ವಹಿಸದಿರಲಿ ಅಥವಾ ಎಲ್ಲಾ ಕಾಫಿರ್ ಎನ್ನುವ ಗುಂಪುಗಳಿಗೆ ಸರದಾರರಾಗಿ ಆಣೆವಹಿಸಲಿ ಮತ್ತು ಅದರ ಫಲ ನೋಡಲಿ. (ಅನ್ವಾರುಲ್ ಇಸ್ಲಾಂ, ರೂಹಾನಿ ಖಝಾಇನ್, ಸಂಪುಟ-9, ಪುಟ-48)

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಒಂದು ಸಾವಿರ ರೂಪಾಯಿ ಬಹುಮಾನದ ಪಂಥಾಹ್ವಾನದ ಪ್ರಕಟಣೆಯ ಬಗ್ಗೆ ಹೇಳಿದರು.

ಒಂದು ನಿರ್ಣಾಯಕ ಪ್ರಕಟಣೆ ಸಾವಿರ ರೂಪಾಯಿಗಳ ಬಹುಮಾನ ಒಳಗೊಂಡ ಮಿಯಾನ್ ರಶೀದ್ ಅಹ್ಮದ್ ಗಂಗೋಹಿ, ಮುಂತಾದವರ ವಿಶ್ವಾಸ ಪರೀಕ್ಷಿಸಲು ಅವರು ಈ ವಿನೀತನ ಬಗ್ಗೆ ಒಂದು ಪ್ರಕಟಣೆ ಪ್ರಕಟಿಸಿರುವರು. ಈ ವ್ಯಕ್ತಿಯು ಕಾಫಿರ್ ಮತ್ತು ದಜ್ಜಾಲ್ ಹಾಗೂ ಶೈತಾನನಾಗಿದ್ದಾನೆ. ಅವರ ಮೇಲೆ ಶಾಪ ಬಯಸುವುದು. ಪುಣ್ಯದ ಮಾತಾಗಿದೆ. ಈ ಪತ್ರಿಕೆಯು ಆ ಎಲ್ಲಾ ಕಾಫಿರ್ ಎನ್ನುವವರು ಸಂಬೋಧಿತರಾಗಿದ್ದಾರೆ, ಅವರುಗಳು ಕಾಫಿರ್, ಅಕ್ಬರ್ ಹೇಳುವುದಿಂದ ಹಿಂಜರಿಯುತ್ತಿಲ್ಲ. ಅವರು ಲೂಧಿಯಾನ್ವಿಗಳಾಗಲಿ ಅಥವಾ ಅಮೃತ್ಸರಿ ಅಥವಾ ಗಝ್ನವಿ ಅಥವಾ ಬಟಾಲ್ವಿ ಅಥವಾ ಗಂಗೋಹಿ ಅಥವಾ ಪಂಜಾಬ್ ಭಾರತದ ಯಾವ ಸ್ಥಳದವರೇ ಆಗಲಿ, ಅವರು ಆ ಸ್ಥಳಗಳಲ್ಲಿ. "ಅಲಾ ಲಅನತುಲ್ಲಾಹಿ ಅಲಲ್ ಕಾಫಿರೀನಲ್ ಮುಕಫ್ಫಿರೀನಲ್ಲಝೀ ಯಕ್ಫುರೂನಲ್ ಮುಸ್ಲಿಮೀನ್" ಅವರೆಲ್ಲರ ಮೇಲೆ ವಾಜಿದ್ ಆಗಿದೆ. ಅವರು ತಮ್ಮ ಪೈಕಿಯ ಮೌಲ್ವಿ ಮುಹಮ್ಮದ್ ಹಸನ್ ಸಾಹಿಬ್ ಲೂಧಿಯಾನ್ವಿ ಅವರಿಗೆ ಆಣೆವಹಿಸಿ ಸಾವಿರ ರೂಪಾಯಿ ನಮ್ಮಿಂದ ಪಡೆದುಕೊಳ್ಳಲಿ ಇಲ್ಲವಾದರೆ ನೆನಪಿರಲಿ ಅವರೆಲ್ಲರೂ ಮುಸ್ಲಿಮರನ್ನು ಅಮುಸ್ಲಿಮರೆಂದ ಕಾರಣ ಮತ್ತು ಸತ್ಯವನ್ನು ನಿರಾಕರಿಸಿ ಶಾಶ್ವತವಾದ ಶಾಪಗ್ರಸ್ತರಾಗಿ ಎಲ್ಲಾ ಶೈತಾನಗಳೊಂದಿಗೆ ನರಕ ಸೇರುವರು ಮತ್ತು ನೆನಪಿಡಲಿ. ಪತ್ರಿಕೆಯಲ್ಲಿದ್ದರು. ವಿಷಯ ಪ್ರಕಾರವೇ ಆಣೆ ವಹಿಸಬೇಕಾಗುವುದು. (ಅದೇ ಪುಟ 47).

ಮುಂಚಿನ ಸಂಚಿಕೆಯಲ್ಲಿ ಇನ್ಶಾಅಲ್ಲಾಹ್ ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಇನ್ನೊಂದು ಬಹುಮಾನದ ಪಂಥಾಹ್ವಾನ ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಹಝ್ರತ್ ರಸೂಲುಲ್ಲಾಹ್(ಸ) ರವರ ನೈಜ ಅನುಸರಣೆಯಿಂದ ಅಲ್ಲಾಹನ ಸಾನಿಧ್ಯ ದೊರೆಯುವುದು. ಅವರ ಅನುಸರಣೆ ಬಿಟ್ಟು ಯಾರು ಎಷ್ಟೇ ಪ್ರಯತ್ನಪಟ್ಟರೂ ಗುರಿ ಸಾಧಿಸಲಾಗದು.

ಹಝ್ರತ್ ರಸೂಲುಲ್ಲಾಹ್(ಸ) ರವರ ಮಾರ್ಗ ಬಿಡಬಾರದು. ನಾನು ನೋಡುತ್ತಿದ್ದೇನೆ. ಜನರು ವಿಧ ವಿಧವಾದ ಆರಾಧನ ಕ್ರಮಗಳನ್ನು ಸೃಷ್ಟಿಸಿಕೊಂಡಿದ್ದಾರೆ. ಅದರ ಮೇಲೆ ಜೋತುಬಿಳುತ್ತಾರೆ. ಯೋಗಿಗಳ ಹಾಗೆ ಸನ್ಯಾಸ ಜೀವನ ನಡೆಸುತ್ತಾರೆ. ಇವೆಲ್ಲಾ ನಿಷ್ಪ್ರಯೋಜಕವಾಗಿವೆ. ಮೇಲೆ ಕೆಳಗೆ ಜೋತು ಬೀಳುವುದು ಪ್ರವಾದಿಗಳ ಮಾರ್ಗವಲ್ಲ. ಅದೇ ಕಾರಣದಿಂದ ಅಲ್ಲಾಹನು ಹಝ್ರತ್ ರಸೂಲುಲ್ಲಾಹ್(ಸ) ರವರನ್ನು ಮಾದರಿ ಪುರುಷರನ್ನಾಗಿ ಮಾಡಿದ್ದಾನೆ. ಹೇಳಿದನು **ಲಕುಂ ಫೀ ರಸೂಲುಲ್ಲಾಹಿ ಉಸ್ವತುನ್ ಹಸನ** (ಅಲ್-ಅಹ್ಝಾಬ್-22) ನಿಸ್ಸಂದೇಹವಾಗಿಯೂ ನಿಮಗೆ ಅಲ್ಲಾಹನ ಸಂದೇಶವಾಹಕನಲ್ಲಿ ಒಂದು ಉತ್ತಮವಾದ ಮಾದರಿ ಇದೆ. ಕಿಂಚಿತ್ತೂ ಸಹ ಆಚೆ ಈಚೆ ಅಲುಗಾಡಲಿಲ್ಲ.

**ಅಹ್ಮದಿಯಾ ಜಮಾಅತ್ತಿನ ಸ್ಥಾಪನೆಯ ಉದ್ದೇಶ**

ಅಂತೂ ಅನುಗ್ರಹಿತರಿಗೆ ಯಾವ ಮಹಿಮೆಗಳು ಲಭಿಸಿದೆಯೋ ಮತ್ತು **ಸಿರಾತಲ್ಲಝೀನ ಅನ್‌ಅಮ್‌ತ ಅಲೈಹಿಂ** (ಅಲ್-ಫಾತಿಹಾ: 7) ದಲ್ಲಿ ಅಲಾಹನು ಏನು ಬಯಸಿದ್ದಾನೆಯೋ ಅದನ್ನು ಪಡೆಯುವುದು ಪ್ರತಿಯೊಬ್ಬ ಮನುಷ್ಯನ ನಿಜವಾದ ಉದ್ದೇಶವಾಗಿದೆ. ನಮ್ಮ ಜಮಾಅತಿಗೆ ವಿಶೇಷವಾಗಿ ಇತ್ತ ಗಮನ ಹರಿಸಬೇಕಾಗಿದೆ. ಏಕೆಂದರೆ ಇದೀಗ ಅಲ್ಲಾಹನು ಹಝ್ರತ್ ರಸೂಲುಲ್ಲಾಹ್(ಸ) ರವರ ಜಮಾಅತ್ ಸ್ಥಾಪಿಸಬಯಸುತ್ತಾನೆ. ಈ ಜಮಾಅತ್ ಪವಿತ್ರ ಖುರ್‌ಆನ್ ಮತ್ತು ಹಝ್ರತ್ ರಸೂಲುಲ್ಲಾಹ್(ಸ) ರವರ ಸತ್ಯತೆ ಹಾಗೂ ಮಹಾನತೆಗೆ ಸಾಕ್ಷ್ಯವಾಗಿ ನಿಲ್ಲಬೇಕು.

**(ಮಲ್ಫೂಝಾತ್ ಸಂಪುಟ-1, ಪುಟ 323, ಮುದ್ರಣ 2018 ಖಾದಿಯಾನ್)**

**ಪ್ರೀತಿ ಎಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

**Love for All, Hatred for None**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.02, Thursday, 23 September 2021, Issue No. 38

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)

**(ಬದರ್ ಸಂಚಿಕೆ 37ರ ವರದಿಯ ಉಳಿದ ಭಾಗ)**

* ಮೆಸೆಡೋನಿಯಾ ತಂಡದ ಅತಿಥಿ ಒಬ್ಬರು Dragan Georgiev ಸಾಹಿಬ್ ಹೇಳಿದರು. ನಾನು ಮೊದಲ ಬಾರಿಗೆ ಜಲ್ಸದಲ್ಲಿ ಭಾಗವಹಿಸಿರುತ್ತೇನೆ. ಇಲ್ಲಿ ಎಲ್ಲವೂ ತುಂಬಾ ವೈಭವಯುತವಾಗಿದ್ದವು. ಅಧಿಕ ಸಂಖ್ಯೆಯಲ್ಲಿ ಜನರು ಭಾಗವಹಿಸಿದ್ದರು. ಮುಸಲ್ಮಾನರೊಂದಿಗೆ ಮೊದಲ ಬಾರಿಗೆ ಇಷ್ಟು ಹತ್ತಿರದಿಂದ ಪರಿಚಯಪಡಲು ಸಾಧ್ಯವಾಗಿದೆ. ಇಸ್ಲಾಮಿ ಶಿಕ್ಷಣದ ಕುರಿತು ಭಾಷಣಗಳನ್ನು ಕೇಳುವಂತಾಗಿದೆ. ಇಲ್ಲಿ ಮುಸಲ್ಮಾನರು ನಮಗೆ ಬೆರರಾಗುವಂತೆ ಸ್ವಾಗತಿಸಿದ್ದಾರೆ. ಜಲ್ಸ ಉತ್ತಮ ಗುಣಮಟ್ಟದ್ದಾಗಿತ್ತು. ಇಷ್ಟೊಂದು ಅಧಿಕ ಸಂಖ್ಯೆಯಲ್ಲಿ ಜನರಿದ್ದರು ಎಲ್ಲರಿಗೂ ಸರಿಯಾಗಿ ನೋಡಿಕೊಳ್ಳಲಾಯಿತು. ಊಟ ಉಪಚಾರ ಇತ್ಯಾದಿ, ಇನ್ನೊಮ್ಮೆ ಬರಲು ಸಾಧ್ಯವಾದರೆ ಖಂಡಿತವಾಗಿಯೂ ಮತ್ತೊಮ್ಮೆ ಬರುವೆನು.

* ಇನ್ನೋರ್ವ ಅತಿಥಿ Zaklina panoska Anotzelkovi ಹೇಳಿದರು. ಜಲ್ಸದ ಏರ್ಪಾಡು ಉನ್ನತಮಟ್ಟದ್ದಾಗಿತ್ತು. ಅತ್ಯಧಿಕ ಜನರ ಹಾಜರಿಯಿಂದ ತುಂಬಾ ಪ್ರಭಾವಿತನಾಗಿದ್ದೇನೆ. ರಕ್ಷಣಾ ವ್ಯವಸ್ಥೆಯು ತುಂಬಾ ಚೆನ್ನಾಗಿತ್ತು. ಹುಝೂರರ ಭಾಷಣ ಮತ್ತು ಇತರ ಭಾಷಣಗಳು ಸಹ ತುಂಬ ಉತ್ತಮವಾಗಿದ್ದವು. ಹುಝೂರ್‌ರೊಡನೆ ಭೇಟಿಯಾಗಿ ತುಂಬ ನೆಮ್ಮದಿ ದೊರೆಯಿತು. ಅವರು ನಮಗೆ ಭೇಟಿ ಮಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಧನ್ಯವಾದಗಳು ತುಂಬ ಅವಸ್ಮರಣಿಯ ಭೇಟಿಯಾಗಿತ್ತು. ಇದು ನನಗೆ ಅಮೋಘವಾದ ಅನುಭವವಾಗಿತ್ತು. ಭೇಟಿ ಆಗಲು ಬಂದ ಜನರೆಲ್ಲರೂ ಹುಝೂರ್‌ರ ಉತ್ತರ ಕೇಳಿ ತೃಪ್ತಿಭಾವ ಹೊಂದಿದ್ದರು. ಹುಝೂರ್‌ರ ಗೌರವಯುತ ವರ್ತನೆ ನೋಡಿ ತೃಪ್ತರಾಗಿದ್ದರು.

* ಮೆಸೆಡೋನಿಯಾದಿಂದ ಬಂದ ಅತಿಥಿ ಒಬ್ಬರು Arben Fejzulai ಸಾಹಿಬ್ ಹೇಳಿದರು. ನಾನು ಜಲ್ಸದಲ್ಲಿ ಮೊದಲ ಬಾರಿಗೆ ಭಾಗವಹಿಸಿರುತ್ತೇನೆ. ಹಾಗಾಗಿ ಎಲ್ಲವು ಹೊಸ ಅನುಭವವಾಗಿತ್ತು. ಇಸ್ಲಾಂ ಧರ್ಮದಲ್ಲಿ ಇಂತಹ ಒಂದು ಜಮಾಅತ್ ಇದೆ ಎಂದು ಸಹ ತಿಳಿದಿರಲಿಲ್ಲ. ಈ ಜಲ್ಸದಲ್ಲಿ ಭಾಗವಹಿಸಿದ ಮೇಲೆ ತಮ್ಮನ್ನು ನಾನು ಶೈಕ್ಷಣಿಕ ನೆಲೆಯಲ್ಲಿ ಉತ್ತಮರು ಎಂದು ಭಾವಿಸಿರುತ್ತೇನೆ. ನನಗೆ ಅಹ್ಮದಿಅತ್ ಬಗ್ಗೆ ಬಹಳಷ್ಟು ತಿಳಿಯಲು ಸಾಧ್ಯವಾಯಿತು. ನಾನು ಸಹ ಜಮಾಅತಿನ ಒಂದು ಅಂಶವೆಂಬಂತೆ ಭಾಸವಾಗುತಿತ್ತು. ಇಷ್ಟು ದೊಡ್ಡ ಸಂಖ್ಯೆಯಲ್ಲಿ ಜನ ಸೇರುವುದು ಮತ್ತು ಅವರೆಲ್ಲರ ಅಗತ್ಯಗಳನ್ನು ಪೂರೈಸುವುದು ಸಾಮಾನ್ಯ ಕೆಲಸವಲ್ಲ.

ಮತ್ತು ಅವರು ಹೇಳಿದರು. ನಾನು ಹುಝೂರರ ಭಾಷಣ ಕೇಳುತ್ತಿರುವಾಗ ನನಗನಿಸಿದ್ದು ಈ ಜನರು ಹೇಗೆ ಮತ್ತು ಎಷ್ಟೊಂದು ಪರಸ್ಪರ ಪ್ರೀತಿಸುವವರಾಗಿದ್ದಾರೆ, ಪರಸ್ಪರ ಗೌರವಿಸುವವರಾಗಿದ್ದಾರೆ ಮತ್ತು ಯಾರಿಗೂ ಸಹ ನಷ್ಟ ಉಂಟು ಮಾಡುತ್ತಿಲ್ಲ ಎಂದು. ಹುಝೂರರಿಂದ ಕೇಳಿದ ಮಾತಿನ ಮೇಲೆ ಯೋಚನೆ ಮಾಡುವೆನು, ನಮ್ಮ ಮತ್ತು ಅಹ್ಮದಿಯರಿಗೆ ಏನು ವ್ಯತ್ಯಾಸವಿದೆ. ಹುಝೂರರಿಂದ ಏನೆಲ್ಲ ಕೇಳಿದ್ದೇನೆ. ಅದು ಹಿತವೆನಿಸಿತು. ಜಮಾಅತಿಗೆ ನನ್ನ ಸಂದೇಶವೇನೆಂದರೆ ನನ್ನ ದೇಶದಲ್ಲಿ ಮತ್ತು ಇತರ ದೇಶಗಳಲ್ಲಿ ಎಲ್ಲೆಲ್ಲಿ ಜಮಾಅತ್ ಸ್ಥಾಪನೆಯಾಗಲಿಲ್ಲವೋ ಅಲ್ಲಿ ಅಹ್ಮದಿ ಮಿಷನ್ನರಿಗಳಿಗೆ (ಪ್ರಚಾರಕರಿಗೆ) ಕಳುಹಿಸಿರಿ. ಅವರು ಜನರಿಗೆ ತಿಳಿಸುವಂತಾಗಲಿ. ಅಹ್ಮದಿಅತ್ ಎಂದರೇನು?

* ಮೆಸೆಡೋನಿಯಾದಿಂದ ಬಂದ ಇನ್ನೋರ್ವ ಅತಿಥಿ Mone Jovanov ಸಾಹಿಬ್ ಹೇಳಿದರು. ನಾನು ಜಲ್ಸದಲ್ಲಿ ಭಾಗವಹಿಸಿ ಅದರ ನೆನಪುಗಳೊಂದಿಗೆ ಮರಳುತಿದ್ದೇನೆ. ಜಲ್ಸದ ಏರ್ಪಾಡುಗಳ ಸಮಸ್ಯೆ ಹೇಗಿದೆ ಎಂದರೆ ಯಾವ ಸಂಸ್ಥೆಯು ಇರಲಿ ತುಂಬ ಪರಿಶ್ರಮವಹಿಸಬೇಕಾಗುತ್ತದೆ. ಅಲ್ಲದೇ ನಾನು ಹೇಳುವೆನು. ಒಂದು ಸರಕಾರವು ಸಹ ಈ ಮಟ್ಟದ ಕಾರ್ಯಕ್ರಮ ಆಯೋಜಿಸಲು ಸಾಧ್ಯವಿಲ್ಲ. ಇದೊಂದು ಅದ್ಭುತ ಅನುಭವವಾಗಿತ್ತು. ಜಲ್ಸದ ವಾತಾವರಣ, ಅದರ ಆಯೋಜನೆ ಅದರ ಏರ್ಪಾಡು, ಎಲ್ಲವು ಅದ್ಭುತ ಮತ್ತು ಸುಂದರವಾಗಿತ್ತು. ಭಾಷಣಗಳು ಚಾತುರ್ಯಪೂರ್ಣವಾಗಿದ್ದವು. ಜಲ್ಸದ ಸಂದೇಶ ಜಾಗತಿಕ ಸಂದೇಶವಾಗಿತ್ತು. 'ಸರ್ವಲೋಕಗಳ ಹಿತ'.

ಹುಝೂರ್‌ರ ಭೇಟಿ ತುಂಬ ರೋಚಕವಾಗಿತ್ತು. ಎಲ್ಲರ ಮಾತುಗಳನ್ನು ತುಂಬ ಶಾಂತಿ ಮತ್ತು ತಾಳ್ಮೆಯಿಂದ ಕೇಳಿದರು. ಮತ್ತು ಅವರಿಗೆ ಉತ್ತರವು ನೀಡಿದರು. ಎಷ್ಟೆಲ್ಲ ಪ್ರಶ್ನೆಗಳನ್ನು ಕೇಳಲಾಯಿತು. ಅದಕ್ಕೆಲ್ಲ ಉತ್ತರ ನೀಡಿದರು. ಹುಝೂರ್‌ರ ಈ ಭೇಟಿ ತುಂಬ ತುಂಬ ಉನ್ನತಮಟ್ಟದಾಗಿತ್ತು.

* ಮೆಸೆಡೋನಿಯಾ ತಂಡದವರಿಂದ ಹುಝೂರ್‌ರ ಈ ಭೇಟಿ 11. 40 ಗಂಟೆಯವರಗೆ ನಡೆಯಿತು. ಕೊನೆಯಲ್ಲಿ ತಂಡದ ಎಲ್ಲ ಸದಸ್ಯರು ಹುಝೂರ್‌ರೊಡನೆ ಭೇಟಿಯಾಗುವ ಭಾಗ್ಯ ಪಡೆದರು. ಮತ್ತು ಭಾವಚಿತ್ರ ತೆಗೆಸುವ ಭಾಗ್ಯ ಪಡೆದರು.

ಹುಝೂರ್‌ರ ಅನ್ವರ್(ಅಬಿಅ) ಭೇಟಿಯ ಅಂತ್ಯದಲ್ಲಿ ತಂಡದ ಎಲ್ಲ ಸದಸ್ಯರಿಗೆ ಲೇಖನಿ (Pen) ನೀಡಿದರು. ಬಾಲಕ ಬಾಲಕಿಯರಿಗೆ ಪ್ರೀತಿಯಿಂದ ಚಾಕ್ಲೇಟ್‌ಗಳನ್ನು ನೀಡಿದರು.

**"ಹುಝೂರ್‌ರೊಡನೆ ಬೋಸ್ನಿಯನ್ ತಂಡದ ಭೇಟಿ"**

ಅನಂತರ ಈ ನಿಯೋಜಿತ ಕಾರ್ಯಕ್ರಮದನ್ವಯ (Bosnia) ದಿಂದ ಬಂದ ತಂಡವು ಹುಝೂರ್ ಅನ್ವರ್ (ಅಬಿಅ) ರೊಡನೆ ಭೇಟಿಯಾಗುವ ಭಾಗ್ಯ ಪಡೆದರು.

ಬೋಸ್ನಿಯಾದಿಂದ ಈ ವರ್ಷ 47 ಜನರ ಒಳಗೊಂಡ ಒಂದು ತಂಡ ಜರ್ಮನಿ ವಾರ್ಷಿಕ ಜಲ್ಸಕ್ಕೆ ಆಗಮಿಸಿತ್ತು. ಅದರಲ್ಲಿ ಒಂದು ದೊಡ್ಡ ಸಂಖ್ಯೆ ಜಮತಿನ ಬಗ್ಗೆ ಕಳಿಯತ್ತಿರುವವರದ್ದಾಗಿತ್ತು. ಹುಝೂರ್ ಆ ತಂಡದವರೊಂದಿಗೆ ಕೇಳಿದರು. ಜಲ್ಸ ಹೇಗಿತ್ತು. ಆಗ ತಕ್ಷಣದಿಂದ ತಂಡದ ಎಲ್ಲ ಸದಸ್ಯರು ಒಕ್ಕೊರಲಿನಿಂದ ಹೇಳಿದರು. ಜಲ್ಸ ತುಂಬ ಒಳ್ಳೆಯದಾಗಿತ್ತು. ಎಲ್ಲಾ ಏರ್ಪಾಡುಗಳು ತುಂಬಾ ಚೆನ್ನಾಗಿದ್ದವು. ಪ್ರತಿಯೊಂದು ಸುವ್ಯವಸ್ಥಿತವಾಗಿತ್ತು.

* ಮಹಿಳೆಯೊರ್ವಳು ಹೇಳಿದರು. ನಾನು ಈ ಜಲ್ಸದಲ್ಲಿ ಭಾಗವಹಿಸಿದ್ದು ನನಗೆ ಹೆಮ್ಮೆಯ ವಿಷಯವಾಗಿದೆ. ನಾನು ಹುಝೂರ್ ಅನ್ವರ್ ಅವರ ಎಲ್ಲಾ ಭಾಷಣಗಳನ್ನು ಕೇಳಿದ್ದೇನೆ. ಆ ಬಗ್ಗೆ ಹೇಳಿಕೊಳ್ಳಲು ನನ್ನಲ್ಲಿ ಪದಗಳಿಲ್ಲ.

ನಂತರ ಅವರು ತನ್ನ ತಂಗಿಗಾಗಿ ದುಆ ಮಾಡಲು ಭಿನ್ನವಿಸಿಕೊಂಡರು ಮತ್ತು ಮನೆಯಲ್ಲಿಯ ಎಲ್ಲಾ ತೊಂದರೆಗಳು

(ಪುಟ ಸಂಖೆ 09 ರಲ್ಲಿ ಮುಂದುವರಿಸಲಾಗಿದೆ)

### 126 ನೇ ಜಲ್ಸಾ ಸಾಲಾನ ಖಾದಿಯಾನ್

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 126ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 24, 25 ಮತ್ತು 26ನೇ ಡಿಸೆಂಬರ್ 2021 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE**

**1800-103-2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.